ಸೂ. 111 — 17. ಬನೀಇಸ್ರಾಈಲ್ — ರು. 12

آياتها ١١١ سُوْرَةُ بَنِيْٓ اِسْرَاۗءِيْلَ مَكِّيَّةٌ ركوعاتها ١٢

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. *ತನ್ನ ಕೆಲವು ನಿದರ್ಶನಗಳನ್ನು ತೋರಿಸಿಕೊಡಲಿಕ್ಕಾಗಿ ತನ್ನ ದಾಸನನ್ನು ಒಂದು ರಾತ್ರಿ 'ಮಸ್ಜಿದುಲ್ ಹರಾಮ್'ನಿಂದ, ನಾವು ಪರಿಸರವನ್ನು ಸಮೃದ್ಧಗೊಳಿಸಿರುವಂತಹ 'ಅಕ್ಸಾ' ಮಸೀದಿಯ ತನಕ ಕೊಂಡು ಹೋದವನು ಪರಮ ಪಾವನನು.[1] ನಿಶ್ಚಯ ವಾಗಿಯೂ ಅವನು ಸರ್ವಶ್ರುತನೂ ಸರ್ವವೀಕ್ಷಕನೂ ಆಗಿರುತ್ತಾನೆ.

سُبْحٰنَ الَّذِيْٓ اَسْرٰى بِعَبْدِهٖ لَيْلًا مِّنَ الْمَسْجِدِ الْحَرَامِ اِلَى الْمَسْجِدِ الْاَقْصَا الَّذِيْ بٰرَكْنَا حَوْلَهٗ لِنُرِيَهٗ مِنْ اٰيٰتِنَا ۭ اِنَّهٗ هُوَ السَّمِيْعُ الْبَصِيْرُ ۝١

2. ನಾವು ಇದಕ್ಕೆ ಮುಂಚೆ ಮೂಸಾರಿಗೆ ಗ್ರಂಥ ನೀಡಿದ್ದೆವು ಮತ್ತು ನನ್ನ ಹೊರತು ಇನ್ನಾರನ್ನೂ ನಿಮ್ಮ ಕಾರ್ಯನಿರ್ವಾಹಕನಾಗಿ[2]

وَاٰتَيْنَا مُوْسَى الْكِتٰبَ وَجَعَلْنٰهُ هُدًى

***ಇಲ್ಲಿಂದ 15ನೆಯ ಕಾಂಡ ಆರಂಭ.**

1. ಇದು 'ಮಿಲ್‌ರಾಜ್' ಎಂದು ಕರೆಯಲ್ಪಡುವ ಘಟನೆಯೇ ಆಗಿದೆ. ಹೆಚ್ಚಿನ ನಂಬಲರ್ಹ ಉಲ್ಲೇಖಗಳ ಪ್ರಕಾರ ಈ ಘಟನೆ ಹಿಜ್ರತ್‌ಗಿಂತ ಒಂದು ವರ್ಷ ಮೊದಲು ನಡೆಯಿತು. ಪ್ರವಾದಿವಚನ (ಹದೀಸ್) ಮತ್ತು ಪ್ರವಾದಿಚರ್ಯೆಯ(ಸೀರತ್) ಗ್ರಂಥಗಳಲ್ಲಿ ಈ ಘಟನೆಯ ವಿವರಗಳನ್ನು ಅನೇಕ ಸಹಾಬಿಗಳು ಉಲ್ಲೇಖಿಸಿದ್ದಾರೆ. ಅವರ ಸಂಖ್ಯೆ ಇಪ್ಪತ್ತೈದರ ತನಕವಿದೆ. ಪವಿತ್ರ ಕುರ್‌ಆನ್ ಮಸ್ಜಿದುಲ್ ಹರಾಮ್ ಅರ್ಥಾತ್ ಬೈತುಲ್ಲಾದಿಂದ ಮಸ್ಜಿದ್ ಅಕ್ಸಾ ಅಥವಾ ಬೈತುಲ್ ಮುಕದ್ದಿಸ್‌ನ ವರೆಗೆ ಪ್ರವಾದಿವರ್ಯರು(ಸ) ಹೋದುದನ್ನು ಮಾತ್ರ ವಿವರಿಸುತ್ತದೆ. ಪ್ರವಾದಿವಚನಗಳಲ್ಲಿ ಬೈತುಲ್ ಮಕ್ದಿಸ್‌ನಿಂದ ಬಾನಲೋಕದ ಅತ್ಯುನ್ನತ ಹಂತಕ್ಕೆ ತಲಪಿ ಅಲ್ಲಾಹನ ಸನ್ನಿಧಿಯಲ್ಲಿ ಪ್ರವಾದಿವರ್ಯರು(ಸ) ಹಾಜರಾದ ವಿವರಗಳನ್ನು ಪ್ರಸ್ತಾಪಿಸಲಾಗಿದೆ. ಈ ಯಾತ್ರೆಯ ಸ್ವರೂಪ ಹೇಗೆ? ಇದು ಜಾಗೃತಾವಸ್ಥೆಯಲ್ಲಿ ನಡೆದಿತ್ತೇ ಅಥವಾ ಕನಸಿನಲ್ಲೇ? ಪ್ರವಾದಿವರ್ಯರು(ಸ) ಸ್ವತಃ ಯಾತ್ರೆ ಕೈಗೊಂಡಿದ್ದರೇ ಅಥವಾ ತಾವು ಕುಳಿತಲ್ಲಿಯೇ ಅವರ ಆತ್ಮಕ್ಕೆ ಅದನ್ನು ತೋರಿಸಲಾಯಿತೇ? ಮುಂತಾದ ಪ್ರಶ್ನೆಗಳಿಗೆ ಪವಿತ್ರ ಕುರ್‌ಆನಿನ ಪದಗಳು ಉತ್ತರ ನೀಡುತ್ತವೆ. "...ಕೊಂಡು ಹೋದವನು ಪರಮಪಾವನನು" ಎಂಬ ಪದದಿಂದ ಮಾತನ್ನು ಆರಂಭಿಸಲಾಗಿರುವುದೇ ಇದೊಂದು ಅಸಾಮಾನ್ಯ ಘಟನೆಯಾಗಿತ್ತು ಎಂಬುದನ್ನು ಸೂಚಿಸುತ್ತದೆ. ಅಂತೆಯೇ ಅಲ್ಲಾಹನ ಅಸಾಮಾನ್ಯ ಸಾಮರ್ಥ್ಯದಿಂದ ಅದು ಸಾಧ್ಯವಾಯಿತು ಎಂಬುದನ್ನು ಧ್ವನಿಸುತ್ತದೆ. ಕನಸಿನಲ್ಲಿ ಒಬ್ಬ ವ್ಯಕ್ತಿ ಇಂತಹ ವಸ್ತುಗಳನ್ನು ನೋಡುವುದು ಅಥವಾ ಅಂತಃಜ್ಞಾನದ ಮೂಲಕ ನೋಡುವುದು ಅತ್ಯಂತ ಪ್ರಮುಖವಾದ ವಿಷಯವೇನಲ್ಲ. ಅದಕ್ಕಾಗಿ ಕನಸಿನ ಅಥವಾ ಅಂತಃ ಜ್ಞಾನದ ಮೂಲಕ ತನ್ನ ದಾಸನಿಗೆ ಇದನ್ನು ತೋರಿಸಿದ ಪ್ರಭು ಸಕಲ ವಿಧ ದೌರ್ಬಲ್ಯ ಮತ್ತು ದೋಷಗಳಿಂದ ಮುಕ್ತನು ಎಂಬ ಪೀಠಿಕೆಯ ಅಗತ್ಯವೂ ಇರುವುದಿಲ್ಲ. ಅಲ್ಲದೆ "ಒಂದು ರಾತ್ರಿಯಲ್ಲಿ ತನ್ನ ದಾಸನನ್ನು ಕೊಂಡು ಹೋದನು" ಎಂಬ ವಾಕ್ಯವೂ ಅದೊಂದು ಶಾರೀರಿಕ ಯಾತ್ರೆಯಾಗಿತ್ತೆಂಬುದಕ್ಕೆ ಆಧಾರವಾಗಿದೆ. ಕನಸಿನ ಯಾತ್ರೆ ಅಥವಾ ಅಂತಃಜ್ಞಾನದ ಯಾತ್ರೆಗೆ ಈ ಪದಗಳು ಎಷ್ಟು ಮಾತ್ರಕ್ಕೂ ಸೂಕ್ತ ವೆನಿಸಲಾರವು. ಆದ್ದರಿಂದ ಇದು ಆತ್ಮಕ್ಕೆ ಮಾಡಿಸಲಾದ ಪ್ರಯೋಗವಾಗಿರಲಿಲ್ಲ. ಬದಲಾಗಿ ಇದು ಅಲ್ಲಾಹನು ಪ್ರವಾದಿವರ್ಯರಿಗೆ(ಸ) ಮಾಡಿಸಿದ ಶಾರೀರಿಕ ಯಾತ್ರೆ ಮತ್ತು ಪ್ರತ್ಯಕ್ಷ ದರ್ಶನವಾಗಿತ್ತೆಂದು ನಂಬದೆ ಅನ್ಯ ದಾರಿಯಿಲ್ಲ.
2. 'ವಕೀಲ್' ಎಂದರೆ ವಿಶ್ವಾಸ ಮತ್ತು ಭರವಸೆಯ ಕೇಂದ್ರಬಿಂದು. ಪೂರ್ಣ ಭರವಸೆಯೊಂದಿಗೆ ತನ್ನ ವ್ಯವಹಾರಗಳನ್ನೆಲ್ಲಾ ಒಪ್ಪಿಸಿ ಬಿಡಲಾಗುವಂತಹವನು. ಸನ್ಮಾರ್ಗದರ್ಶನ ಮತ್ತು ಸಹಾಯಕ್ಕಾಗಿ ಯಾರನ್ನು ಸಂಪರ್ಕಿಸಲಾಗುತ್ತದೋ ಅವನು.

ಮಾಡಿಕೊಳ್ಳಬಾರದೆಂಬ ಅಪ್ಪಣೆಯೊಂದಿಗೆ ಅದನ್ನು ಬನೀ ಇಸ್ರಾಈಲರಿಗೆ ಸನ್ಮಾರ್ಗದರ್ಶನದ ಸಾಧನವನ್ನಾಗಿ ಮಾಡಿದ್ದೆವು.

لِّبَنِىٓ إِسْرَٰٓءِيلَ أَلَّا تَتَّخِذُوا مِن دُونِى وَكِيلًا ﴿٢﴾

3. ನೂಹರ ಸಂಗಡ ನಾವು ನಾವೆಯಲ್ಲಿ ಏರಿಸಿದ್ದವರ ಸಂತತಿ ನೀವಾಗಿರುತ್ತೀರಿ ಮತ್ತು ನೂಹ್ ಓರ್ವ ಕೃತಜ್ಞ ದಾಸರಾಗಿದ್ದರು.

ذُرِّيَّةَ مَنْ حَمَلْنَا مَعَ نُوحٍ ۚ إِنَّهُۥ كَانَ
عَبْدًا شَكُورًا ﴿٣﴾

4. ತರುವಾಯ ನಾವು ಬನೀಇಸ್ರಾಈಲರಿಗೆ - ನೀವು ಎರಡು ಬಾರಿ ಭೂಮಿಯಲ್ಲಿ ಗೊಂದಲವನ್ನುಂಟು ಮಾಡುವಿರಿ ಹಾಗೂ ಭಾರೀ ವಿದ್ರೋಹ ತೋರುವಿರಿ ಎಂದು ನಮ್ಮ ಗ್ರಂಥದಲ್ಲಿ[3] ಎಚ್ಚರಿಸಿ ಬಿಟ್ಟಿದ್ದೆವು.

وَقَضَيْنَآ إِلَىٰ بَنِىٓ إِسْرَٰٓءِيلَ فِى ٱلْكِتَٰبِ
لَتُفْسِدُنَّ فِى ٱلْأَرْضِ مَرَّتَيْنِ وَلَتَعْلُنَّ
عُلُوًّا كَبِيرًا ﴿٤﴾

5. ಕೊನೆಗೆ ಆ ಪೈಕಿ ಪ್ರಥಮ ವಿದ್ರೋಹ ಸಂಭವಿಸಿದಾಗ (ಓ ಬನೀಇಸ್ರಾಈಲರೇ!) ನಾವು ನಿಮ್ಮ ವಿರುದ್ಧ ನಮ್ಮ ಅತ್ಯಂತ ಪ್ರಬಲರಾಗಿದ್ದ ದಾಸರನ್ನು ಎಬ್ಬಿಸಿದೆವು ಮತ್ತು ಅವರು ನಿಮ್ಮ ನಾಡುಗಳಿಗೆ ನುಗ್ಗಿ ಎಲ್ಲ ಕಡೆ ಹಬ್ಬಿ ಹೋದರು.[4] ಇದು ನೆರವೇರಬೇಕಾಗಿದ್ದ ಒಂದು ವಾಗ್ದಾನವಾಗಿತ್ತು.

فَإِذَا جَآءَ وَعْدُ أُولَىٰهُمَا بَعَثْنَا عَلَيْكُمْ
عِبَادًا لَّنَآ أُولِى بَأْسٍ شَدِيدٍ فَجَاسُوا
خِلَٰلَ ٱلدِّيَارِ ۚ وَكَانَ وَعْدًا مَّفْعُولًا ﴿٥﴾

6. ಅನಂತರ ನಾವು ನಿಮಗೆ ಅವರ ಮೇಲೆ ಪ್ರಾಬಲ್ಯ ಸ್ಥಾಪಿಸುವ ಅವಕಾಶ ನೀಡಿದೆವು. ನಿಮಗೆ ಸಂಪತ್ತು ಹಾಗೂ ಸಂತತಿಗಳಿಂದ ನೆರವಾದೆವು ಮತ್ತು ನಿಮ್ಮ ಸಂಖ್ಯೆಯನ್ನು ಮೊದಲಿಗಿಂತ ಹೆಚ್ಚಿಸಿದೆವು.

ثُمَّ رَدَدْنَا لَكُمُ ٱلْكَرَّةَ عَلَيْهِمْ وَأَمْدَدْنَٰكُم
بِأَمْوَٰلٍ وَبَنِينَ وَجَعَلْنَٰكُمْ أَكْثَرَ نَفِيرًا ﴿٦﴾

7. ನೋಡಿರಿ- ನೀವು ಸತ್ಕರ್ಮ ಮಾಡಿದ್ದರೆ ಅದು ನಿಮ್ಮ ಹಿತಕ್ಕಾಗಿಯೇ ಮಾಡಿದ್ದೀರಿ, ದುಷ್ಕರ್ಮವೆಸಗಿದ್ದರೆ ಅದು ನಿಮಗೇ ಕೇಡಾಗಿ ಪರಿಣಮಿಸಿತು. ತರುವಾಯ ಎರಡನೆಯ ವಾಗ್ದಾನದ ಕಾಲ ಬಂದಾಗ ನಿಮ್ಮ ಮುಖಗಳನ್ನು ವಿರೂಪಗೊಳಿಸುವಂತೆಯೂ ಮಸೀದಿ(ಬೈತುಲ್ ಮಕ್ದಿಸ್)ಯಲ್ಲಿ ಹಿಂದೆ ಶತ್ರುಗಳು ನುಗ್ಗಿದಂತೆ ನುಗ್ಗುವಂತೆಯೂ ಅವರ ಕೈಗೆ ಸಿಕ್ಕಿದುದನ್ನೆಲ್ಲ ನಾಶಗೊಳಿಸುವಂತೆಯೂ ನಾವು ನಿಮ್ಮ ಮೇಲೆ ಇತರ ಶತ್ರುಗಳನ್ನು ಹೇರಿಬಿಟ್ಟೆವು.[5]

إِنْ أَحْسَنتُمْ أَحْسَنتُمْ لِأَنفُسِكُمْ ۖ وَإِنْ
أَسَأْتُمْ فَلَهَا ۚ فَإِذَا جَآءَ وَعْدُ ٱلْءَاخِرَةِ لِيَسُۥٓـُٔوا
وُجُوهَكُمْ وَلِيَدْخُلُوا ٱلْمَسْجِدَ كَمَا دَخَلُوهُ
أَوَّلَ مَرَّةٍ وَلِيُتَبِّرُوا مَا عَلَوْا تَتْبِيرًا ﴿٧﴾

3. ಇಲ್ಲಿ 'ಕಿತಾಬ್' ಎಂದು ಹೇಳಲಾಗಿರುವುದು 'ತೌರಾತ್'ನ ಕುರಿತಲ್ಲ. ಬದಲಾಗಿ ಅದು ದಿವ್ಯಗ್ರಂಥಗಳ ಸಂಕಲನವಾಗಿದೆ. ಅದಕ್ಕೆ 'ಅಲ್ ಕಿತಾಬ್' ಎಂಬ ಪದ ಕುರ್‌ಆನಿನಲ್ಲಿ ಅನೇಕ ಕಡೆಗಳಲ್ಲಿ ಪ್ರಯೋಗವಾಗಿದೆ.
4. ಅರ್ಥಾತ್- ಅಶೂರಿಗಳು ಮತ್ತು ಬೆಬಿಲೋನಿನವರ ಮೂಲಕ ಬನೀಇಸ್ರಾಈಲರ ಮೇಲೆ ಎರಗಿದ ಮಾರಕ ವಿನಾಶ.
5. ಅರ್ಥಾತ್- ಬೈತುಲ್ ಮುಕದ್ದಿಸನ್ನು ಸಂಪೂರ್ಣವಾಗಿ ನಾಶ ಪಡಿಸಿ, ಬನೀಇಸ್ರಾಈಲರನ್ನು ಫೆಲೆಸ್ತೀನ್‌ನಿಂದ ಹೊಡೆದೋಡಿಸಿದ ರೋಮನ್ನರು ಅಂದಿನಿಂದ ಇಂದಿನ ತನಕ ಎರಡು ಸಾವಿರ ವರ್ಷಗಳ ಅವಧಿಯಲ್ಲಿ ಲೋಕದಾದ್ಯಂತ ಚದುರಿ ಹರಿಹಂಚಾಗಿದ್ದಾರೆ.

8. ಈಗ ನಿಮ್ಮ ಪ್ರಭು ನಿಮ್ಮ ಮೇಲೆ ದಯೆ ತೋರಲೂ ಬಹುದು. ಆದರೆ ನೀವು ನಿಮ್ಮ ಗತ ನೀತಿಯನ್ನು ಪುನರಾವರ್ತಿಸಿದರೆ ನಾವು ನಮ್ಮ ಶಿಕ್ಷೆಯನ್ನು ಪುನರಾವರ್ತಿಸುವೆವು. ಧಿಕ್ಕಾರಿಗಳಿಗೆ ನಾವು ನರಕವನ್ನು ಸೆರೆಮನೆಯನ್ನಾಗಿ ಮಾಡಿಟ್ಟಿದ್ದೇವೆ.

عَسَىٰ رَبُّكُمْ أَن يَرْحَمَكُمْ ۚ وَإِنْ عُدتُّمْ
عُدْنَا ۘ وَجَعَلْنَا جَهَنَّمَ لِلْكَافِرِينَ حَصِيرًا ⑧

9. ವಾಸ್ತವದಲ್ಲಿ ಈ ಕುರ್‌ಆನ್ ಅತ್ಯಂತ ನೇರ ಮಾರ್ಗವನ್ನು ತೋರಿಸಿ ಕೊಡುತ್ತದೆ. ಇದನ್ನು ಸ್ವೀಕರಿಸಿಕೊಂಡು ಸತ್ಕರ್ಮವೆಸಗಿದವರಿಗೆ ದೊಡ್ಡ ಸತ್ಫಲವಿದೆಯೆಂಬ ಸುವಾರ್ತೆಯನ್ನು ನೀಡುತ್ತದೆ.

إِنَّ هَٰذَا الْقُرْآنَ يَهْدِي لِلَّتِي هِيَ أَقْوَمُ
وَيُبَشِّرُ الْمُؤْمِنِينَ الَّذِينَ يَعْمَلُونَ الصَّالِحَاتِ
أَنَّ لَهُمْ أَجْرًا كَبِيرًا ⑨

10. ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸದವರಿಗೆ ನಾವು ಅವರಿಗಾಗಿ ಘೋರ ಯಾತನೆಯನ್ನು ಸಿದ್ಧಗೊಳಿಸಿಟ್ಟಿದ್ದೇವೆಂದು ತಿಳಿಸುತ್ತದೆ.

وَأَنَّ الَّذِينَ لَا يُؤْمِنُونَ بِالْآخِرَةِ
أَعْتَدْنَا لَهُمْ عَذَابًا أَلِيمًا ⑩

11. ಮಾನವನು ಒಳಿತನ್ನು ಬೇಡಿಕೊಳ್ಳಬೇಕಾದ ರೀತಿಯಲ್ಲಿ ಕೆಡುಕನ್ನು ಬೇಡುತ್ತಾನೆ. ಮನುಷ್ಯನು ಮಹಾ ದುಡುಕು ಸ್ವಭಾವದವನು.[6]

وَيَدْعُ الْإِنسَانُ بِالشَّرِّ دُعَاءَهُ بِالْخَيْرِ ۖ
وَكَانَ الْإِنسَانُ عَجُولًا ⑪

12. ನಾವು ಇರುಳು ಮತ್ತು ಹಗಲನ್ನು ಎರಡು ನಿದರ್ಶನಗಳಾಗಿ ಮಾಡಿರುತ್ತೇವೆ. ನೀವು ನಿಮ್ಮ ಪ್ರಭುವಿನ ಅನುಗ್ರಹವನ್ನು ಅರಸಿಕೊಳ್ಳಲಾಗುವಂತೆಯೂ ಸಂವತ್ಸರಗಳ ಗಣನೆಯನ್ನು ಮಾಡಿಕೊಳ್ಳುವಂತೆಯೂ ನಾವು ಇರುಳಿನ ನಿದರ್ಶನವನ್ನು ಮಬ್ಬಾಗಿಯೂ ಹಗಲಿನ ನಿದರ್ಶನವನ್ನು ಪ್ರಕಾಶಮಾನವಾಗಿಯೂ ಮಾಡಿದೆವು. ನಾವು ಪ್ರತಿಯೊಂದು ವಸ್ತುವನ್ನೂ ಇದೇ ರೀತಿಯಲ್ಲಿ ಬೇರ್ಪಡಿಸಿಟ್ಟಿರುತ್ತೇವೆ.

وَجَعَلْنَا اللَّيْلَ وَالنَّهَارَ آيَتَيْنِ ۖ فَمَحَوْنَا
آيَةَ اللَّيْلِ وَجَعَلْنَا آيَةَ النَّهَارِ مُبْصِرَةً
لِّتَبْتَغُوا فَضْلًا مِّن رَّبِّكُمْ وَلِتَعْلَمُوا عَدَدَ
السِّنِينَ وَالْحِسَابَ ۚ وَكُلَّ شَيْءٍ
فَصَّلْنَاهُ تَفْصِيلًا ⑫

6. ಇದು ಮಕ್ಕಾದ ಸತ್ಯನಿಷೇಧಿಗಳು ಪ್ರವಾದಿವರ್ಯರೊಂದಿಗೆ(ಸ) ಆಡುತ್ತಿದ್ದ ಮೂರ್ಖತನದಿಂದ ಕೂಡಿದ ಮಾತುಗಳಿಗೆ ಉತ್ತರವಾಗಿದೆ. "ನೀವು ನಮ್ಮನ್ನು ಎಚ್ಚರಿಸುತ್ತಿರುವ ಆ ಯಾತನೆಯನ್ನು ಈಗಲೇ ತಂದು ಬಿಡಿ" ಎಂದು ಅವರು ಹೇಳುತ್ತಿದ್ದರು. ಮೇಲಿನ ಪ್ರಸ್ತಾಪಗಳ ತಕ್ಷಣ ಈ ಸೂಕ್ತವನ್ನು ಉಲ್ಲೇಖಿಸಲಾಗಿರುವುದರ ಉದ್ದೇಶ ಅವರಿಗೆ ಎಚ್ಚರಿಕೆ ಕೊಡುವುದಾಗಿದೆ. “ಮೂರ್ಖರೇ! ನೀವು ಒಳಿತಿನ ಬದಲು ಯಾತನೆಯನ್ನು ನಿರೀಕ್ಷಿಸುತ್ತಿದ್ದಿರಾ? ದೇವನ ಯಾತನೆ ಯಾವುದೇ ಸಮುದಾಯದ ಮೇಲೆ ಎರಗಿದಾಗ ಅದರ ಗತಿ ಏನಾಗುತ್ತದೆಂದು ನಿಮಗೆ ತಿಳಿದಿದೆಯೇ?” ಎಂದು ಎಚ್ಚರಿಸಲಾಗಿದೆ. ಅದರ ಜತೆಗೆ ಈ ಸೂಕ್ತದಲ್ಲಿ ಸೂಕ್ಷ್ಮವಾಗಿ ಮುಸ್ಲಿಮರನ್ನೂ ಎಚ್ಚರಿಸಲಾಗಿದೆ. ಸತ್ಯನಿಷೇಧಿಗಳ ಅಕ್ರಮ ಮತ್ತು ಅವರ ಹಟಸಾಧನೆಗಳಿಂದ ಬೇಸತ್ತು ಕೆಲವು ಮುಸ್ಲಿಮರು ಅವರ ಮೇಲೆ ಯಾತನೆ ಎರಗಲೆಂದು ಪ್ರಾರ್ಥಿಸುತ್ತಿದ್ದರು. ವಾಸ್ತವದಲ್ಲಿ ಆ ಸತ್ಯನಿಷೇಧಿಗಳ ಪೈಕಿಯೇ ಮುಂದೆ ಇಸ್ಲಾಮ್ ಸ್ವೀಕರಿಸಿ ಲೋಕದಾದ್ಯಂತ ಇಸ್ಲಾಮಿನ ಧ್ವಜವಾಹಕರಾಗಿ ಬಿಡಬಲ್ಲಂತಹ ವ್ಯಕ್ತಿಗಳು ಅನೇಕ ಮಂದಿ ಇದ್ದರು. ಆದ್ದರಿಂದ ಅಲ್ಲಾಹನು ಮಾನವ ಮಹಾ ತಾಳ್ಮೆಗೆಟ್ಟವನು ಎಂದು ಹೇಳುತ್ತಿದ್ದಾನೆ. ತಕ್ಷಣ ಬೇಕೆನಿಸಿದ ಎಲ್ಲವನ್ನೂ ಅವನು ದೇವನೊಡನೆ ಯಾಚಿಸುತ್ತಾನೆ. ಆದರೆ ಅನಂತರ ತನ್ನ ಪ್ರಾರ್ಥನೆ ಆಗ ಸ್ವೀಕರಿಸಲ್ಪಡುತ್ತಿದ್ದರೆ ಅದು ತನ್ನ ಪಾಲಿಗೆ ಹಿತಕರವಾಗುತ್ತಿರಲಿಲ್ಲ ಎಂದು ಅವನೇ ಸ್ವಾನುಭವದ ಮೂಲಕ ಕಂಡುಕೊಳ್ಳುತ್ತಾನೆ.

13. ಪ್ರತಿಯೊಬ್ಬ ಮನುಷ್ಯನ ಶಕುನವನ್ನು ನಾವು ಅವನ ಕೊರಳಿಗೇ ಕಟ್ಟಿ ಬಿಡುತ್ತೇವೆ.[7] ಪುನರುತ್ಥಾನ ದಿನದಂದು ನಾವು ಅವನಿಗಾಗಿ ಒಂದು ಲಿಖಿತವನ್ನು ಹೊರಡಿಸುವೆವು. ಅವನು ಅದನ್ನು ತೆರೆದ ಗ್ರಂಥದಂತೆ ಕಾಣುವನು.

وَكُلَّ اِنْسَانٍ اَلْزَمْنٰهُ طٰٓئِرَهٗ فِيْ عُنُقِهٖ ؕ
وَنُخْرِجُ لَهٗ يَوْمَ الْقِيٰمَةِ كِتٰبًا يَّلْقٰىهُ مَنْشُوْرًا ۝١٣

14. ನಿನ್ನ ಕರ್ಮ ಪತ್ರವನ್ನು ಓದು. ಇಂದು ನಿನ್ನ ಲೆಕ್ಕ ತೆಗೆಯಲು ನೀನೇ ಸಾಕು.

اِقْرَاْ كِتٰبَكَ ؕ كَفٰى بِنَفْسِكَ الْيَوْمَ
عَلَيْكَ حَسِيْبًا ؕ ۝١٤

15. ಸನ್ಮಾರ್ಗ ಸ್ವೀಕರಿಸಿಕೊಳ್ಳುವವನ ಸನ್ಮಾರ್ಗ ಗಮನವು ಅವನಿಗೇ ಒಳಿತಾಗಿದೆ ಮತ್ತು ಪಥಭ್ರಷ್ಟನ ಪಥಭ್ರಷ್ಟತೆಯ ವಿಪತ್ತೂ ಅವನ ಮೇಲೆಯೇ ಬೀಳುತ್ತದೆ. ಯಾವ ಹೊರೆ ಹೊರುವಾತನೂ ಇನ್ನೊಬ್ಬನ ಹೊರೆಯನ್ನು ಹೊರಲಾರನು.[8] (ಜನರಿಗೆ ಸತ್ಯಾಸತ್ಯತೆಗಳ ಅಂತರವನ್ನು ತೋರಿಸಿ ಕೊಡಲು) ಓರ್ವ ಸಂದೇಶವಾಹಕನನ್ನು ಕಳುಹಿಸಿಕೊಡದೆ ನಾವು ಯಾತನೆ ಕೊಡುವವರಲ್ಲ.

مَنِ اهْتَدٰى فَاِنَّمَا يَهْتَدِيْ لِنَفْسِهٖ ۚ
وَمَنْ ضَلَّ فَاِنَّمَا يَضِلُّ عَلَيْهَا ؕ وَلَا
تَزِرُ وَازِرَةٌ وِّزْرَ اُخْرٰى ؕ وَمَا كُنَّا
مُعَذِّبِيْنَ حَتّٰى نَبْعَثَ رَسُوْلًا ۝١٥

16. ನಾವು ಒಂದು ನಾಡನ್ನು ನಾಶಗೊಳಿಸಲಿಚ್ಛಿಸಿದಾಗ ಅದರ ಸ್ಥಿತಿವಂತರಿಗೆ ಅಪ್ಪಣೆ ಕೊಡುತ್ತೇವೆ ಮತ್ತು ಅವರು ಅದರಲ್ಲಿ ಆಜ್ಞೋಲ್ಲಂಘನೆ ಮಾಡ ತೊಡಗುತ್ತಾರೆ. ಆಗ ಯಾತನೆಯ ತೀರ್ಮಾನವು ಆ ನಾಡಿಗೆ ಅನ್ವಯವಾಗಿ ಬಿಡುತ್ತದೆ ಮತ್ತು ನಾವು ಅದನ್ನು ಸಂಪೂರ್ಣ ನಾಶ ಮಾಡಿಬಿಡುತ್ತೇವೆ.[9]

وَاِذَآ اَرَدْنَآ اَنْ نُّهْلِكَ قَرْيَةً اَمَرْنَا مُتْرَ
فِيْهَا فَفَسَقُوْا فِيْهَا فَحَقَّ عَلَيْهَا الْقَوْلُ
فَدَمَّرْنٰهَا تَدْمِيْرًا ۝١٦

17. ನೋಡಿಕೊಳ್ಳಿರಿ! ನೂಹರ ಅನಂತರ ನಮ್ಮ ಅಪ್ಪಣೆಯಿಂದ ನಾಶಗೊಂಡ ಅನೇಕ ತಲೆಮಾರುಗಳಿವೆ. ತನ್ನ ದಾಸರ ಪಾಪಗಳ ಬಗ್ಗೆ ಸಂಪೂರ್ಣ ಬೋಧವಿರಿಸಿಕೊಳ್ಳಲಿಕ್ಕೂ ಸರ್ವವನ್ನೂ ವೀಕ್ಷಿಸಲಿಕ್ಕೂ ನಿನ್ನ ಪ್ರಭುವೇ ಸಾಕು.

وَكَمْ اَهْلَكْنَا مِنَ الْقُرُوْنِ مِنْۢ بَعْدِ
نُوْحٍ ؕ وَكَفٰى بِرَبِّكَ بِذُنُوْبِ عِبَادِهٖ
خَبِيْرًۢا بَصِيْرًا ۝١٧

7. ಅರ್ಥಾತ್- ಪ್ರತಿಯೊಬ್ಬ ಮಾನವ ಸೌಭಾಗ್ಯ-ದೌರ್ಭಾಗ್ಯಗಳು ಮತ್ತು ಅಂತಿಮ ಪರಿಣಾಮವಾಗಿ ಅವನಿಗೆ ಒದಗುವ ಒಳಿತು-ಕೆಡುಕುಗಳ ಕಾರಣಗಳು ಸ್ವತಃ ಅವನ ವ್ಯಕ್ತಿತ್ವದಲ್ಲೇ ಅಡಕವಾಗಿದೆ.

8. ಅರ್ಥಾತ್- ಪ್ರತಿಯೊಬ್ಬ ವ್ಯಕ್ತಿಯೂ ಶಾಶ್ವತವಾದ ನೈತಿಕ ಹೊಣೆಯನ್ನು ಹೊಂದಿದ್ದಾನೆ. ಅಲ್ಲಾಹನ ಮುಂದೆ ಅವನು ವ್ಯಕ್ತಿಗತವಾದ ಉತ್ತರದಾಯಿತ್ವವನ್ನು ಹೊಂದಿದ್ದಾನೆ. ಇಂತಹ ವೈಯಕ್ತಿಕ ಹೊಣೆಗಾರಿಕೆಯಲ್ಲಿ ಬೇರಾವುದೇ ವ್ಯಕ್ತಿ ಅವನ ಜತೆಗಿರಲಾರ.

9. ಒಂದು ಸಮಾಜವನ್ನು ಅಂತಿಮವಾಗಿ ನಾಶ ಪಡಿಸಿ ಬಿಡುವುದು ಆ ಸಮಾಜದ ಸ್ಥಿತಿವಂತ ಮತ್ತು ಉನ್ನತ ವರ್ಗದ ಕೆಡುಕುಗಳಾಗಿವೆ ಎಂಬ ವಾಸ್ತವಿಕತೆಯ ಬಗ್ಗೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ. ಯಾವುದಾದರೊಂದು ಸಮಾಜ ವಿನಾಶಕ್ಕೀಡಾಗುವುದಿದ್ದರೆ ಅದರ ಸಿರಿವಂತ ಮತ್ತು ಅಧಿಕಾರ ಸ್ಥಾನದಲ್ಲಿರುವ ಜನರು ಕೆಡುಕು ಮತ್ತು ಭ್ರಷ್ಟಾಚಾರದಲ್ಲಿ ತೊಡಗುತ್ತಾರೆ. ಅಕ್ರಮ, ಅನ್ಯಾಯ, ಕೆಡುಕು ಮತ್ತು ಕಿಡಿಗೇಡಿತನಗಳನ್ನು ಎಸಗತೊಡಗುತ್ತಾರೆ. ಕೊನೆಗೆ ಈ ಕ್ಷೋಭೆ ಸಮಸ್ತ ಸಮುದಾಯವನ್ನು ಮುಳುಗಿಸಿ ಬಿಡುತ್ತದೆ. ಆದ್ದರಿಂದ ಆತ್ಮವಂಚನೆ ಮಾಡಿ ಕೊಳ್ಳಬಯಸದ ಸಮಾಜ, ತಮ್ಮ ಅಧಿಕಾರದ ಚುಕ್ಕಾಣಿ ಮತ್ತು ಸಂಪತ್ತಿನ ಚಾವಿಗಳು ಸಂಕುಚಿತ ಮತಿಗಳ ಮತ್ತು ಅನೈತಿಕತೆಗೆ ಈಡಾಗಿರುವ ವ್ಯಕ್ತಿಗಳ ಕೈಗಳಿಗೆ ಹೊರಟು ಹೋಗದಂತೆ ಸದಾ ಎಚ್ಚರಿಕೆ ವಹಿಸಬೇಕಾಗಿದೆ.

18. (ಈ ಲೋಕದಲ್ಲಿ) ಶೀಘ್ರವಾಗಿ ಪ್ರಾಪ್ತವಾಗುವ ಫಲಗಳನ್ನು ಅಪೇಕ್ಷಿಸುವವನಿಗೆ, ನಾವು ಕೊಡಲಿಚ್ಛಿಸುವುದನ್ನು ಇಲ್ಲೇ ಕೊಟ್ಟು ಬಿಡುತ್ತೇವೆ. ಅನಂತರ ಅವನ ಪಾಲಿಗೆ ನರಕವನ್ನು ಬರೆದು ಬಿಡುತ್ತೇವೆ. ಅದರಲ್ಲಿ ಅವನು ಧಿಕ್ಕರಿಸಲ್ಪಟ್ಟು ಹಾಗೂ ಕೃಪೆಯಿಂದ ವಂಚಿತನಾಗಿ ಬೇಯುತ್ತಿರುವನು.

مَنْ كَانَ يُرِيدُ الْعَاجِلَةَ عَجَّلْنَا لَهُ
فِيهَا مَا نَشَاءُ لِمَنْ نُرِيدُ ثُمَّ جَعَلْنَا
لَهُ جَهَنَّمَ ۚ يَصْلَاهَا مَذْمُومًا مَدْحُورًا ﴿١٨﴾

19. ಮತ್ತು ಯಾರಾದರೂ ಪರಲೋಕವನ್ನು ಇಷ್ಟಪಟ್ಟು ಅದಕ್ಕಾಗಿ ಪ್ರಯತ್ನಿಸಬೇಕಾದ ರೀತಿಯಲ್ಲಿ ಪ್ರಯತ್ನಿಸಿದರೆ ಮತ್ತು ಅವನು ಸತ್ಯವಿಶ್ವಾಸಿಯಾಗಿದ್ದರೆ - ಇಂತಹ ಪ್ರತಿಯೊಬ್ಬನ ಪ್ರಯತ್ನವು ಕೃತಾರ್ಥವಾಗುವುದು.[10]

وَمَنْ أَرَادَ الْآخِرَةَ وَسَعَىٰ لَهَا سَعْيَهَا وَ
هُوَ مُؤْمِنٌ فَأُولَٰئِكَ كَانَ سَعْيُهُمْ مَشْكُورًا ﴿١٩﴾

20. ನಾವು ಇವರಿಗೂ ಅವರಿಗೂ ಎರಡು ವರ್ಗದವರಿಗೂ (ಇಹ ಲೋಕದಲ್ಲಿ) ಜೀವನ ಸಾಮಗ್ರಿಯನ್ನು ಕೊಡುತ್ತಿರುತ್ತೇವೆ. ಇದು ನಿನ್ನ ಪ್ರಭುವಿನ ಕೊಡುಗೆ. ನಿನ್ನ ಪ್ರಭುವಿನ ಕೊಡುಗೆಯನ್ನು ತಡೆಯುವವನು ಯಾರೂ ಇಲ್ಲ.

كُلًّا نُمِدُّ هَٰؤُلَاءِ وَهَٰؤُلَاءِ مِنْ عَطَاءِ
رَبِّكَ ۚ وَمَا كَانَ عَطَاءُ رَبِّكَ مَحْظُورًا ﴿٢٠﴾

21. ಆದರೆ ನಾವು ಇಹಲೋಕದಲ್ಲಿ ಒಂದು ವರ್ಗಕ್ಕೆ ಇನ್ನೊಂದು ವರ್ಗದ ಮೇಲೆ ಎಂತಹ ಶ್ರೇಷ್ಠತೆ ಪ್ರದಾನ ಮಾಡಿರುತ್ತೇವೆಂದು ನೋಡಿರಿ.[11] ಪರಲೋಕದಲ್ಲಿ ಅದರ ಸ್ಥಾನವು ಇನ್ನಷ್ಟು ಹೆಚ್ಚುವುದು ಮತ್ತು ಅದರ ಶ್ರೇಷ್ಠತೆ ಮತ್ತಷ್ಟು ಅಧಿಕವಾಗುವುದು.

انْظُرْ كَيْفَ فَضَّلْنَا بَعْضَهُمْ عَلَىٰ بَعْضٍ ۚ
وَلَلْآخِرَةُ أَكْبَرُ دَرَجَاتٍ وَأَكْبَرُ تَفْضِيلًا ﴿٢١﴾

22. ನೀನು ಅಲ್ಲಾಹನೊಂದಿಗೆ ಬೇರಾರನ್ನೂ ಆರಾಧ್ಯನಾಗಿ ಮಾಡಿ ಕೊಳ್ಳಬೇಡ. ಅನ್ಯಥಾ ಶಪಿತನಾಗಿ ಅಸಹಾಯಕನಾಗಿ ಕುಳಿತು ಕೊಂಡಿರುವೆ.

لَا تَجْعَلْ مَعَ اللَّهِ إِلَٰهًا آخَرَ فَتَقْعُدَ
مَذْمُومًا مَخْذُولًا ﴿٢٢﴾

10. ಅರ್ಥಾತ್- ಅವನ ಕರ್ಮವನ್ನು ಮಾನ್ಯ ಮಾಡಲಾಗುವುದು. ಪರಲೋಕ ವಿಜಯಕ್ಕಾಗಿ ಅವನು ಯಾವ ಮಟ್ಟದ ಪ್ರಯತ್ನಗಳನ್ನು ಮಾಡಿರುವನೋ ಅದಕ್ಕೆ ಅನುಗುಣವಾಗಿ ಅವನಿಗೆ ಪ್ರತಿಫಲ ನೀಡಲಾಗುವುದು.

11. ಪರಲೋಕವನ್ನು ಬಯಸುವವರಿಗೆ ಇಹಲೋಕಾರ್ಥಿಗಳಿಗಿಂತ ಶ್ರೇಷ್ಠತೆ ನೀಡಲಾಗಿರುವ ಆ ಅಂತರ, ಲೌಕಿಕ ಜೀವನದಲ್ಲೂ ಸ್ಪಷ್ಟವಾಗಿ ಗೋಚರಿಸುತ್ತದೆ. ಶ್ರೇಷ್ಠತೆ ಎಂದರೆ ಅವರ ಅನ್ನ-ಪಾನೀಯ, ಉಡುಗೆ-ತೊಡುಗೆ, ನಿವಾಸ, ವಾಹನ, ಸಂಸ್ಕೃತಿ ಮತ್ತು ನಾಗರಿಕತೆಗಳೆಲ್ಲವೂ ಅವರಿಗಿಂತ ಮುಂದಿರುತ್ತದೆ ಎಂದಲ್ಲ. ಬದಲಾಗಿ ಅವರು ಪಡೆಯುವುದೆಲ್ಲವನ್ನೂ ಸತ್ಯ, ಪ್ರಾಮಾಣಿಕತೆ ಮತ್ತು ನಿಸ್ಪೃಹತೆಯೊಂದಿಗೆ ಪಡೆಯುತ್ತಾರೆ. ಅದೇ ವೇಳೆ ಇಹಲೋಕಾರ್ಥಿಗಳು ಎಲ್ಲವನ್ನೂ ಅಕ್ರಮ, ಅನ್ಯಾಯ ಮತ್ತು ನಾನಾ ತರದ ನಿಷಿದ್ಧ ಉಪಭೋಗಗಳ ಮೂಲಕ ಪಡೆಯುತ್ತಾರೆ. ಮಾತ್ರವಲ್ಲ ಪರಲೋಕಾರ್ಥಿಗಳು ತಮಗೆ ದೊರೆತಿರುವುದನ್ನು ಸಂತುಲಿತ ರೂಪದಲ್ಲಿ ವ್ಯಯಿಸುತ್ತಾರೆ. ಆ ಮೂಲಕ ಹಕ್ಕುದಾರರಿಗೆ ಸಲ್ಲಬೇಕಾದ ಹಕ್ಕು ಸಂದಾಯವಾಗುತ್ತದೆ. ಯಾಚಕರ ಮತ್ತು ಅಪೇಕ್ಷಿತರ ಪಾಲನ್ನೂ ಅವರು ನೀಡುತ್ತಾರೆ. ದೇವಸಂಪ್ರೀತಿ ಗಳಿಸಲಿಕ್ಕಾಗಿ ಇತರ ಸತ್ಕಾರ್ಯಗಳಿಗೂ ಅವರು ವೆಚ್ಚಮಾಡುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಲೋಕಾರಾಧಕರು ತಮಗೆ ದೊರೆತಿರುವುದೆಲ್ಲವನ್ನೂ ಆಡಂಬರ, ವಿಲಾಸ, ನಿಷಿದ್ಧ ಕೆಲಸಗಳು, ಗೊಂದಲ ಮತ್ತು ಕ್ಷೋಭೆ ಹುಟ್ಟಿಸುವಂತಹ ಕಾರ್ಯಗಳಲ್ಲಿ ನೀರಿನಂತೆ ಪೋಲು ಮಾಡುತ್ತಾರೆ. ಹೀಗೆ ಎಲ್ಲ ರೀತಿಯಿಂದಲೂ ಪರಲೋಕಾರ್ಥಿಗಳ ಜೀವನ ಇಹಲೋಕಾರ್ಥಿಗಳಿಗಿಂತ ಉತ್ತಮವಾಗಿರುತ್ತದೆ.

وَقَضٰى رَبُّكَ اَلَّا تَعْبُدُوْٓا اِلَّآ اِيَّاهُ وَ
بِالْوَالِدَيْنِ اِحْسَانًا ؕ اِمَّا يَبْلُغَنَّ عِنْدَكَ
الْكِبَرَ اَحَدُهُمَآ اَوْ كِلٰهُمَا فَلَا تَقُلْ لَّهُمَآ
اُفٍّ وَّلَا تَنْهَرْهُمَا وَقُلْ لَّهُمَا قَوْلًا كَرِيْمًا ﴿٢٣﴾

23. ನಿಮ್ಮ ಪ್ರಭು (ಹೀಗೆ) ವಿಧಿಸಿ ಬಿಟ್ಟಿದ್ದಾನೆ; ನೀವು ಕೇವಲ ಅವನೊಬ್ಬನ ಹೊರತು ಇನ್ನಾರ ದಾಸ್ಯ-ಆರಾಧನೆಯನ್ನೂ ಮಾಡಬಾರದು. ಮಾತಾಪಿತರೊಡನೆ ಸೌಜನ್ಯದಿಂದ ವರ್ತಿಸಿರಿ. ಅವರ ಪೈಕಿ ಒಬ್ಬರು ಅಥವಾ ಅವರಿಬ್ಬರೂ ವೃದ್ಧರಾಗಿ ನಿಮ್ಮ ಬಳಿಯಲ್ಲಿದ್ದರೆ, ಅವರ ಬಗ್ಗೆ ಚಕಾರವೆತ್ತಬೇಡಿರಿ ಮತ್ತು ಅವರನ್ನು ಜರೆಯಬೇಡಿರಿ. ಅವರೊಂದಿಗೆ ಗೌರವಪೂರ್ವಕ ವಾಗಿ ಮಾತನಾಡಿರಿ.

وَاخْفِضْ لَهُمَا جَنَاحَ الذُّلِّ مِنَ الرَّحْمَةِ
وَقُلْ رَّبِّ ارْحَمْهُمَا كَمَا رَبَّيٰنِيْ صَغِيْرًا ﴿٢٤﴾

24. ನಯ ವಿನಯ ಮತ್ತು ಕರುಣೆಯೊಂದಿಗೆ ಅವರ ಮುಂದೆ ಬಾಗಿಕೊಂಡಿರಿ. "ಓ ನನ್ನ ಪ್ರಭೂ! ಇವರು ನನ್ನ ಚಿಕ್ಕಂದಿನಲ್ಲಿ ದಯಾ ವಾತ್ಸಲ್ಯಗಳಿಂದ ನನ್ನನ್ನು ಸಾಕಿದಂತೆಯೇ ನೀನು ಅವರ ಮೇಲೆ ಕೃಪೆತೋರು" ಎಂದು ಪ್ರಾರ್ಥಿಸಿರಿ.

رَبُّكُمْ اَعْلَمُ بِمَا فِيْ نُفُوْسِكُمْ ؕ اِنْ تَكُوْنُوْا
صٰلِحِيْنَ فَاِنَّهٗ كَانَ لِلْاَوَّابِيْنَ غَفُوْرًا ﴿٢٥﴾

25. ನಿಮ್ಮ ಅಂತರಂಗದಲ್ಲಿ ಏನಿದೆಯೆಂಬುದನ್ನು ನಿಮ್ಮ ಪ್ರಭು ಚೆನ್ನಾಗಿ ಬಲ್ಲನು. ನೀವು ಸಜ್ಜನರಾಗಿ ಬಾಳಿಕೊಂಡಿದ್ದರೆ ತಮ್ಮ ಅಪರಾಧಗಳ ಬಗ್ಗೆ ಜಾಗೃತರಾಗಿ ದಾಸ್ಯ-ಆರಾಧನೆಯ ಕಡೆಗೆ ಮರಳಿ ಬರುವಂತಹ ಸರ್ವರನ್ನೂ ಅವನು ಕ್ಷಮಿಸುವವನಾಗಿರು ತ್ತಾನೆ.

وَاٰتِ ذَا الْقُرْبٰى حَقَّهٗ وَالْمِسْكِيْنَ وَابْنَ
السَّبِيْلِ وَلَا تُبَذِّرْ تَبْذِيْرًا ﴿٢٦﴾

26. ಸಂಬಂಧಿಕನಿಗೆ ಅವನ ಹಕ್ಕನ್ನೂ, ದರಿದ್ರನಿಗೂ, ಪ್ರಯಾಣಿಕನಿಗೂ ಅವನವನ ಹಕ್ಕನ್ನೂ ಕೊಡಿರಿ. ದುಂದುವೆಚ್ಚ ಮಾಡಬೇಡಿರಿ.

اِنَّ الْمُبَذِّرِيْنَ كَانُوْٓا اِخْوَانَ الشَّيٰطِيْنِ ؕ
وَكَانَ الشَّيْطٰنُ لِرَبِّهٖ كَفُوْرًا ﴿٢٧﴾

27. ದುಂದುಗಾರರು ಶೈತಾನನ ಸೋದರರಾಗಿರುತ್ತಾರೆ ಮತ್ತು ಶೈತಾನನು ತನ್ನ ಪ್ರಭುವಿಗೆ ಕೃತಘ್ನನು.

وَاِمَّا تُعْرِضَنَّ عَنْهُمُ ابْتِغَآءَ رَحْمَةٍ مِّنْ
رَّبِّكَ تَرْجُوْهَا فَقُلْ لَّهُمْ قَوْلًا مَّيْسُوْرًا ﴿٢٨﴾

28. ನೀವು ನಿರೀಕ್ಷಿಸುತ್ತಿರುವ ಅಲ್ಲಾಹನ ಕೃಪೆಯನ್ನು ಇನ್ನೂ ಅರಸುತ್ತಿರುವ ಕಾರಣ ನಿಮಗೆ ಅವರಿಂದ (ನಿರ್ಗತಿಕರಾದ ಸಂಬಂಧಿಕರಿಂದ, ದರಿದ್ರರಿಂದ ಮತ್ತು ಪ್ರಯಾಣಿಕರಿಂದ) ತಪ್ಪಿಸಿಕೊಳ್ಳ ಬೇಕೆಂದಾದರೆ, ಅವರಿಗೆ ನಯವಾಗಿ ಉತ್ತರಕೊಡಿರಿ.

وَلَا تَجْعَلْ يَدَكَ مَغْلُوْلَةً اِلٰى عُنُقِكَ
وَلَا تَبْسُطْهَا كُلَّ الْبَسْطِ فَتَقْعُدَ
مَلُوْمًا مَّحْسُوْرًا ﴿٢٩﴾

29. ನಿಮ್ಮ ಕೈಯನ್ನು ಕೊರಳಿಗೆ ಕಟ್ಟಿಕೊಂಡಿರಲೂ ಬೇಡಿರಿ ಮತ್ತು ನಿಂದ್ಯರೂ ನಿಸ್ಸಹಾಯಕರೂ ಆಗಿ ಬಿಡುವಂತೆ ಅದನ್ನು ಸಂಪೂರ್ಣವಾಗಿ ತೆರೆದಿಟ್ಟು ಬಿಡಲೂ ಬೇಡಿರಿ.[12]

12. ಕೈಯನ್ನು ಕಟ್ಟಿಕೊಳ್ಳುವುದು ಎಂಬುದನ್ನು ಆಲಂಕಾರಿಕವಾಗಿ ಜಿಪುಣತೆಗೆ ಉಪಯೋಗಿಸಲಾಗಿದೆ. ಅದನ್ನು ತೆರೆದು ಬಿಡುವುದೆಂದರೆ ದುಂದುವ್ಯಯ ಮಾಡುವುದಾಗಿದೆ.

30. ನಿನ್ನ ಪ್ರಭು ತನಗಿಷ್ಟ ಬಂದವರಿಗೆ ಜೀವನಾಧಾರವನ್ನು ವಿಶಾಲಗೊಳಿಸುತ್ತಾನೆ ಮತ್ತು ತನಗಿಷ್ಟ ಬಂದವರಿಗೆ ಸಂಕುಚಿತ ಗೊಳಿಸುತ್ತಾನೆ. ಅವನು ತನ್ನ ದಾಸರ ಸ್ಥಿತಿ-ಗತಿಗಳನ್ನು ಅರಿತವ ನಾಗಿರುತ್ತಾನೆ ಮತ್ತು ಅವರನ್ನು ವೀಕ್ಷಿಸುತ್ತಿದ್ದಾನೆ.

إِنَّ رَبَّكَ يَبْسُطُ الرِّزْقَ لِمَنْ يَشَآءُ وَيَقْدِرُ ۚ إِنَّهُۥ كَانَ بِعِبَادِهِۦ خَبِيرًۢا بَصِيرًا ﴿٣٠﴾

31. ನಿಮ್ಮ ಮಕ್ಕಳನ್ನು ಬಡತನದ ಭೀತಿಯಿಂದ ಕೊಲ್ಲಬೇಡಿರಿ. ನಾವು ಅವರಿಗೂ ಆಹಾರ ನೀಡುವೆವು ನಿಮಗೂ ನೀಡುವೆವು. ವಾಸ್ತವದಲ್ಲಿ ಅವರ ವಧೆಯು ಒಂದು ಘೋರ ಅಪರಾಧವಾಗಿದೆ.

وَلَا تَقْتُلُوٓا۟ أَوْلَٰدَكُمْ خَشْيَةَ إِمْلَٰقٍ ۖ نَّحْنُ نَرْزُقُهُمْ وَإِيَّاكُمْ ۚ إِنَّ قَتْلَهُمْ كَانَ خِطْـًٔا كَبِيرًا ﴿٣١﴾

32. ವ್ಯಭಿಚಾರದ ಹತ್ತಿರವೂ ಸುಳಿಯಬೇಡಿರಿ. ಅದು ಅತಿ ಹೀನ ಕಾರ್ಯ ಮತ್ತು ಅತ್ಯಂತ ಕೆಟ್ಟ ಮಾರ್ಗ.

وَلَا تَقْرَبُوا۟ الزِّنَىٰٓ ۖ إِنَّهُۥ كَانَ فَٰحِشَةً وَسَآءَ سَبِيلًا ﴿٣٢﴾

33. ಅಲ್ಲಾಹನು ಸನ್ಮಾನಿಸಿರುವ ಜೀವವನ್ನು ನ್ಯಾಯದಿಂದಲ್ಲದೆ ಹರಣ ಮಾಡಬೇಡಿರಿ. ಅಕ್ರಮವಾಗಿ ವಧಿಸಲ್ಪಟ್ಟವವನ ವಾರೀಸುದಾರನಿಗೆ ಪ್ರತೀಕಾರ ಪಡೆಯುವ ಹಕ್ಕನ್ನು ನಾವು ನೀಡಿರುತ್ತೇವೆ.[13] ಆದುದರಿಂದ ಅವನು ವಧೆಯಲ್ಲಿ ಹದಮೀರ ಬಾರದು.[14] ನಿಶ್ಚಯವಾಗಿಯೂ ಅವನಿಗೆ ಸಹಾಯ ಮಾಡಲಾಗುವುದು.[15]

وَلَا تَقْتُلُوا۟ النَّفْسَ الَّتِى حَرَّمَ اللَّهُ إِلَّا بِالْحَقِّ ۗ وَمَن قُتِلَ مَظْلُومًا فَقَدْ جَعَلْنَا لِوَلِيِّهِۦ سُلْطَٰنًا فَلَا يُسْرِف فِّى الْقَتْلِ ۖ إِنَّهُۥ كَانَ مَنصُورًا ﴿٣٣﴾

34. ಅನಾಥನ ಸೊತ್ತನ್ನು ಉತ್ತಮ ರೀತಿಯಿಂದಲ್ಲದೆ ಸಮೀಪಿಸ ಬಾರದು - (ಇದು) ಅವನು ಯೌವನಾವಸ್ಥೆಗೆ ತಲಪುವ ತನಕ. ವಚನವನ್ನು ಪಾಲಿಸಿರಿ. ನಿಶ್ಚಯವಾಗಿಯೂ ವಚನದ ಕುರಿತು- ನಿಮ್ಮನ್ನು ಪ್ರಶ್ನಿಸಲಾಗುವುದು.

وَلَا تَقْرَبُوا۟ مَالَ الْيَتِيمِ إِلَّا بِالَّتِى هِىَ أَحْسَنُ حَتَّىٰ يَبْلُغَ أَشُدَّهُۥ ۚ وَأَوْفُوا۟ بِالْعَهْدِ ۖ إِنَّ الْعَهْدَ كَانَ مَسْـُٔولًا ﴿٣٤﴾

35. ಅಳತೆ ಮಾಡಿ ಕೊಡುವಾಗ ಪೂರ್ಣ ತುಂಬಿಸಿ ಕೊಡಿರಿ.

وَأَوْفُوا۟ الْكَيْلَ إِذَا كِلْتُمْ وَزِنُوا۟ بِالْقِسْطَاسِ

13. ಮೂಲದಲ್ಲಿ 'ಅವನ ವಾರೀಸುದಾರರಿಗೆ ಸುಲ್ತಾನ್' ನೀಡಿದ್ದೇವೆ ಎಂದಿದೆ. ಸುಲ್ತಾನ್ ಎಂದರೆ ಇಲ್ಲಿ 'ಆಧಾರ ಪ್ರಮಾಣ' ಎಂದಾಗಿದೆ. ಅದರ ಆಧಾರದಲ್ಲೇ ಅವನು ಪ್ರತೀಕಾರದ ಬೇಡಿಕೆಯನ್ನು ಮುಂದಿಡಬಹುದಾಗಿದೆ.

14. ಕೊಲೆಯಲ್ಲಿ ಎಲ್ಲೆ ಮೀರುವುದರ ಅನೇಕ ವಿಧಗಳಿರಬಹುದು. ಅವುಗಳೆಲ್ಲವೂ ನಿಷಿದ್ಧ. ಉದಾಹರಣೆಗೆ ಪ್ರತೀಕಾರದ ಆವೇಶದಲ್ಲಿ ಅಪರಾಧಿಯ ಬದಲು ಇತರರನ್ನು ಕೊಲ್ಲುವುದು, ಅಥವಾ ಅಪರಾಧಿಯನ್ನು ನಿರಂತರ ದಂಡಿಸಿದ ಬಳಿಕ ವಧಿಸುವುದು, ಅಥವಾ ವಧಿಸಿದ ನಂತರ ಮೃತದೇಹದೊಂದಿಗೆ ಆಕ್ರೋಶ ಪ್ರದರ್ಶಿಸುವುದು, ಅಥವಾ ರಕ್ತಪರಿಹಾರ ಧನವನ್ನು ಪಡೆದ ಬಳಿಕ ಅವನನ್ನು ವಧಿಸುವುದು ಇತ್ಯಾದಿ.

15. ಆ ತನಕ ಇಸ್ಲಾಮೀ ಸರ್ಕಾರ ರಚಿತವಾಗಿರಲಿಲ್ಲವಾದ್ದರಿಂದ ಅವನಿಗೆ ಸಹಾಯ ಮಾಡ ಬೇಕಾದವರು ಯಾರು ಎಂಬುದನ್ನು ಇಲ್ಲಿ ವ್ಯಕ್ತಪಡಿಸಲಾಗಿಲ್ಲ. ಮದೀನಾ ವಲಸೆಯ ನಂತರ ಇಸ್ಲಾಮೀ ಸರ್ಕಾರ ಸ್ಥಾಪನೆಗೊಂಡಾಗ, ಅವನಿಗೆ ಸಹಾಯ ಮಾಡುವುದು ಅವನ ಗೋತ್ರದವರ ಅಥವಾ ಬೆಂಬಲಿಗರ ಕೆಲಸವಲ್ಲ, ಬದಲಾಗಿ ಅದು ಇಸ್ಲಾಮೀ ಸರ್ಕಾರ ಮತ್ತು ಅದರ ನ್ಯಾಯಾಂಗ ವ್ಯವಸ್ಥೆಯ ಕೆಲಸವಾಗಿದೆ ಎಂಬುದನ್ನು ನಿರ್ಧರಿಸಲಾಯಿತು. ಕೊಲೆಗೆ ಪ್ರತೀಕಾರ ತೀರಿಸುವ ಅಧಿಕಾರ ಯಾವುದೇ ವ್ಯಕ್ತಿ ಅಥವಾ ಸಮೂಹಕ್ಕೆ ಇಲ್ಲ. ಇದು ಇಸ್ಲಾಮೀ ಸರ್ಕಾರದ ಕೆಲಸ. ನ್ಯಾಯಗಳಿಕೆಗಾಗಿ ಅದರಿಂದಲೇ ಸಹಾಯ ಯಾಚಿಸಬೇಕು.

الْمُسْتَقِيمِ ذَٰلِكَ خَيْرٌ وَأَحْسَنُ تَأْوِيلًا ٣٥

ತೂಗುವಾಗ ಸರಿಯಾದ ತಕ್ಕಡಿಯಲ್ಲಿ ತೂಗಿರಿ. ಇದು ಒಳ್ಳೆಯ ಕ್ರಮ ಮತ್ತು ಪರಿಣಾಮದ ದೃಷ್ಟಿಯಿಂದಲೂ ಇದುವೇ ಉತ್ತಮ.

وَلَا تَقْفُ مَا لَيْسَ لَكَ بِهِ عِلْمٌ ۚ إِنَّ السَّمْعَ وَالْبَصَرَ وَالْفُؤَادَ كُلُّ أُولَٰئِكَ كَانَ عَنْهُ مَسْئُولًا ٣٦

36. ನಿಮಗೆ ಜ್ಞಾನವಿಲ್ಲದಂತಹ ವಸ್ತುಗಳನ್ನು ಬೆಂಬತ್ತಬೇಡಿರಿ.[16] ನಿಶ್ಚಯವಾಗಿಯೂ ಶ್ರವಣ, ದೃಷ್ಟಿ ಮತ್ತು ಮನಸ್ಸು ಇವೆಲ್ಲವುಗಳ ವಿಚಾರಣೆ ನಡೆಯಲಿದೆ.

وَلَا تَمْشِ فِي الْأَرْضِ مَرَحًا ۖ إِنَّكَ لَنْ تَخْرِقَ الْأَرْضَ وَلَنْ تَبْلُغَ الْجِبَالَ طُولًا ٣٧

37. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡಿರಿ. ನೀವು ಭೂಮಿಯನ್ನು ಸೀಳಲಾರಿರಿ ಮತ್ತು ಪರ್ವತಗಳ ಶಿಖರಕ್ಕೂ ತಲಪಲಾರಿರಿ.

كُلُّ ذَٰلِكَ كَانَ سَيِّئُهُ عِنْدَ رَبِّكَ مَكْرُوهًا ٣٨

38. ಈ ವಿಷಯದಲ್ಲಿ ಪ್ರತಿಯೊಂದು ದೋಷ ಭಾಗವು ನಿಮ್ಮ ಪ್ರಭುವಿನ ಬಳಿ ಅಪ್ರಿಯವಾಗಿರುತ್ತದೆ.[17]

ذَٰلِكَ مِمَّا أَوْحَىٰ إِلَيْكَ رَبُّكَ مِنَ الْحِكْمَةِ ۗ وَلَا تَجْعَلْ مَعَ اللَّهِ إِلَٰهًا آخَرَ فَتُلْقَىٰ فِي جَهَنَّمَ مَلُومًا مَدْحُورًا ٣٩

39. ನಿಮ್ಮ ಪ್ರಭು ನಿಮ್ಮ ಮೇಲೆ 'ದಿವ್ಯವಾಣಿ' ಮಾಡಿದ (ಅವತೀರ್ಣಗೊಳಿಸಿದ) ಯುಕ್ತಿಪೂರ್ಣ ಮಾತುಗಳಿವು. ಇದೋ ನೋಡು! ಅಲ್ಲಾಹನೊಂದಿಗೆ ಇನ್ನಾವ ಆರಾಧ್ಯನನ್ನೂ ಮಾಡಿಕೊಳ್ಳಬೇಡ. ಅನ್ಯಥಾ ನೀನು ನಿಂದ್ಯನಾಗಿ ಸಕಲ ಒಳಿತುಗಳಿಂದ ವಂಚಿತನಾಗಿ ನರಕದೊಳಗೆ ತಳ್ಳಲ್ಪಡುವೆ.[18]

أَفَأَصْفَاكُمْ رَبُّكُمْ بِالْبَنِينَ وَاتَّخَذَ مِنَ الْمَلَائِكَةِ إِنَاثًا ۚ إِنَّكُمْ لَتَقُولُونَ قَوْلًا عَظِيمًا ٤٠

40. ನಿಮ್ಮ ಪ್ರಭು ನಿಮಗೆ ಪುತ್ರರನ್ನು ದಯಪಾಲಿಸಿ ತನಗಾಗಿ ದೇವಚರರನ್ನು ಪುತ್ರಿಯರನ್ನಾಗಿ ಮಾಡಿಕೊಂಡನೆಂಬುದು ಎಂತಹ ಸೋಜಿಗದ ವಿಷಯ. ನಿಶ್ಚಯವಾಗಿಯೂ ನೀವು ಒಂದು ಘೋರ ಸುಳ್ಳನ್ನಾಡುತ್ತಿರುವಿರಿ.

وَلَقَدْ صَرَّفْنَا فِي هَٰذَا الْقُرْآنِ لِيَذَّكَّرُوا وَمَا يَزِيدُهُمْ إِلَّا نُفُورًا ٤١

41. ಜನರು ಜಾಗೃತರಾಗಲೆಂದು ನಾವು ಈ ಕುರ್‌ಆನಿನಲ್ಲಿ ವಿಧ ವಿಧವಾಗಿ ಅವರಿಗೆ ಬೋಧಿಸಿದ್ದೇವು. ಆದರೆ ಅವರು ಸತ್ಯದಿಂದ ಇನ್ನಷ್ಟು ದೂರಕ್ಕೆ ಓಡುತ್ತಿದ್ದಾರೆ.

قُلْ لَوْ كَانَ مَعَهُ آلِهَةٌ كَمَا يَقُولُونَ إِذًا لَابْتَغَوْا إِلَىٰ ذِي الْعَرْشِ سَبِيلًا ٤٢

42. ಓ ಪೈಗಂಬರರೇ! ಇವರೊಡನೆ ಹೇಳಿರಿ- ಇವರು ಹೇಳುವ ಪ್ರಕಾರ ಅಲ್ಲಾಹನ ಸಂಗಡ ಇತರ ದೇವರೂ ಇರುತ್ತಿದ್ದರೆ ಅವರು 'ವಿಶ್ವ ಸಿಂಹಾಸನದ' ಮಾಲಕನ ಸ್ಥಾನಕ್ಕೆ ತಲಪಲು ಖಂಡಿತವಾಗಿಯೂ ಪ್ರಯತ್ನ ನಡೆಸುತ್ತಿದ್ದರು.

16. ಜನರು ತಮ್ಮ ವೈಯಕ್ತಿಕ ಅಥವಾ ಸಾಮೂಹಿಕ ಜೀವನದಲ್ಲಿ ಭ್ರಮೆ ಅಥವಾ ಗುಮಾನಿಗಳ ಬದಲು 'ಜ್ಞಾನ'ವನ್ನು ಅನುಸರಿಸಬೇಕು ಎಂಬುದು ಈ ಬೋಧನೆಯ ಉದ್ದೇಶ.

17. ಅರ್ಥಾತ್- ಈ ಆದೇಶಗಳ ಪೈಕಿ ಯಾವುದನ್ನು ಉಲ್ಲಂಘಿಸುವುದೂ ಅರೋಚಕ ವಿಷಯವಾಗಿದೆ.

18. ಮಾನವರೆಲ್ಲರೂ ಈ ಬೋಧನೆಯ ಸಂಬೋಧಿತರಾಗಿದ್ದಾರೆ. ಅರ್ಥಾತ್, ಓ ಮಾನವಾ! ನೀನು ಈ ಕೆಲಸವನ್ನು ಮಾಡದಿರು.

43. ಇವರು ಹೇಳುತ್ತಿರುವ ಮಾತುಗಳಿಂದ ಅವನು ಪರಿಶುದ್ಧನೂ ಅತ್ಯುನ್ನತನೂ ಆಗಿರುತ್ತಾನೆ.

سُبۡحٰنَهٗ وَتَعٰلٰى عَمَّا يَقُوۡلُوۡنَ عُلُوًّا كَبِيۡرًا ﴿۴۳﴾

44. ಸಪ್ತಗಗನಗಳೂ ಭೂಮಿಯೂ ಅವುಗಳಲ್ಲಿರುವ ಸಕಲ ವಸ್ತುಗಳೂ ಅವನ ಪಾವಿತ್ರ್ಯವನ್ನು ಕೊಂಡಾಡುತ್ತಿವೆ.[19] ಅವನ ಪ್ರಶಂಸೆಯೊಂದಿಗೆ ಅವನ 'ಜಪ' (ತಸ್ಬೀಹ್) ಮಾಡದ ಯಾವ ವಸ್ತುವೂ ಇಲ್ಲ. ಆದರೆ ನೀವು ಅವುಗಳ 'ಜಪ'ವನ್ನು ಗ್ರಹಿಸುವುದಿಲ್ಲ. ವಾಸ್ತವದಲ್ಲಿ ಅವನು ಅತ್ಯಂತ ಸಹನಶೀಲನೂ ಕ್ಷಮಾದಾನಿಯೂ ಆಗಿರುತ್ತಾನೆ.

تُسَبِّحُ لَهُ السَّمٰوٰتُ السَّبۡعُ وَالۡاَرۡضُ وَمَنۡ فِيۡهِنَّ‌ ؕ وَاِنۡ مِّنۡ شَىۡءٍ اِلَّا يُسَبِّحُ بِحَمۡدِهٖ وَلٰـكِنۡ لَّا تَفۡقَهُوۡنَ تَسۡبِيۡحَهُمۡ‌ ؕ اِنَّهٗ كَانَ حَلِيۡمًا غَفُوۡرًا ﴿۴۴﴾

45. ನೀವು ಕುರ್‌ಆನ್ ಪಠಿಸುವಾಗ ನಿಮ್ಮ ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸದವರ ನಡುವೆ ನಾವು ಒಂದು ತೆರೆಯನ್ನು ಹಾಕಿ ಬಿಡುತ್ತೇವೆ-

وَاِذَا قَرَاۡتَ الۡقُرۡاٰنَ جَعَلۡنَا بَيۡنَكَ وَبَيۡنَ الَّذِيۡنَ لَا يُؤۡمِنُوۡنَ بِالۡاٰخِرَةِ حِجَابًا مَّسۡتُوۡرًا ۙ‏ ﴿۴۵﴾

46. ಅವರು ಏನನ್ನೂ ಗ್ರಹಿಸದಂತಾಗಲು ಅವರ ಹೃದಯಗಳ ಮೇಲೆ (ಹೊದಿಕೆಯನ್ನು) ಹಾಕಿ ಬಿಡುತ್ತೇವೆ ಮತ್ತು ಅವರ ಕಿವಿಗಳಲ್ಲಿ ಕಿವುಡುತನವನ್ನುಂಟು ಮಾಡಿ ಬಿಡುತ್ತೇವೆ.[20] ನೀವು ಕುರ್‌ಆನಿನಲ್ಲಿ ಕೇವಲ ನಿಮ್ಮ ಏಕ ಮಾತ್ರ ಪ್ರಭುವನ್ನು ಪ್ರಸ್ತಾಪಿಸುವಾಗ ಅವರು ತಿರಸ್ಕಾರದಿಂದ ಮುಖ ತಿರುಗಿಸಿ ಬಿಡುತ್ತಾರೆ.[21]

وَّجَعَلۡنَا عَلٰى قُلُوۡبِهِمۡ اَكِنَّةً اَنۡ يَّفۡقَهُوۡهُ وَفِىۡۤ اٰذَانِهِمۡ وَقۡرًا‌ ؕ وَاِذَا ذَكَرۡتَ رَبَّكَ فِى الۡقُرۡاٰنِ وَحۡدَهٗ وَلَّوۡا عَلٰۤى اَدۡبَارِهِمۡ نُفُوۡرًا ﴿۴۶﴾

19. ಅರ್ಥಾತ್- ನಿಸರ್ಗ ಮತ್ತು ಅದರಲ್ಲಿರುವ ಪ್ರತಿಯೊಂದು ವಸ್ತುವಿನ ಅಸ್ತಿತ್ವವೇ-ತನ್ನನ್ನು ಸೃಷ್ಟಿಸಿ ಪರಿಪಾಲಿಸುತ್ತಿರುವ ಪ್ರಭು ದೋಷಮುಕ್ತನು, ದೌರ್ಬಲ್ಯ ರಹಿತನು, ಸಹಭಾಗಿತ್ವದಿಂದ ಸಂಪೂರ್ಣ ಪರಿಶುದ್ಧನು ಎಂಬ ವಾಸ್ತವಿಕತೆಯ ಸಾಕ್ಷ್ಯ ನುಡಿಯುತ್ತಿದೆ.

20. ಅರ್ಥಾತ್- ಪರಲೋಕದ ಮೇಲೆ ವಿಶ್ವಾಸವಿಡದೆ ಇರುವುದರಿಂದ ಸಹಜವಾಗಿಯೇ ವ್ಯಕ್ತಿ ತನ್ನ ಮನಸ್ಸಿಗೆ ಬೀಗ ಜಡಿದು ಕೊಂಡಂತಾಗುತ್ತದೆ. ಅವನ ಕಿವಿ ಕುರ್‌ಆನ್ ಸಮರ್ಪಿಸುವ ಸಂದೇಶದ ಪಾಲಿಗೆ ಮುಚ್ಚಿ ಬಿಡುತ್ತದೆ. ಲೌಕಿಕ ಜೀವನದ ಬಾಹ್ಯ ಅಂಶಗಳನ್ನು ನೋಡಿ ಮೋಸಹೋಗದಿರಿ ಎಂಬುದೇ ಕುರ್‌ಆನಿನ ಸಂದೇಶದ ಮೂಲವಾಗಿದೆ. ಒಳಿತು-ಕೆಡುಕುಗಳ ತೀರ್ಮಾನ ಈ ಲೋಕದಲ್ಲಲ್ಲ ಬದಲಾಗಿ ಪರಲೋಕದಲ್ಲಿ ನಡೆಯುತ್ತದೆ. ಪರಲೋಕದಲ್ಲಿ ಉತ್ತಮ ಪರಿಣಾಮವನ್ನು ನೀಡುವಂತಹುದೇ ಒಳಿತಾಗಿದೆ. ಲೋಕದಲ್ಲಿ ಅದರಿಂದಾಗಿ ಅವನೆಷ್ಟು ತ್ರಾಸಪಡಬೇಕಾಗಿ ಬಂದರೂ ಸರಿಯೇ. ಪರಲೋಕದಲ್ಲಿ ಕೆಟ್ಟ ಪರಿಣಾಮವನ್ನುಂಟು ಮಾಡುವಂತಹುದೇ ಕೆಡುಕಾಗಿದೆ. ಲೋಕದಲ್ಲಿ ಅದೆಷ್ಟು ಸ್ವಾದಿಷ್ಟ ಮತ್ತು ಉಪಯುಕ್ತವಾಗಿ ಕಂಡರೂ ಸರಿಯೇ. ಪರಲೋಕವನ್ನೇ ನಿರಾಕರಿಸುವ ವ್ಯಕ್ತಿ ಕುರ್‌ಆನಿನ ಈ ಸಂದೇಶದ ಕಡೆ ಹೇಗೆ ಗಮನಹರಿಸಿಯಾನು?

21. ಒಬ್ಬ ಅಲ್ಲಾಹನು ಮಾತ್ರ ಒಡೆಯನೂ ಪರಮಾಧಿಕಾರಿಯೂ ಆಗಿದ್ದಾನೆ ಎಂದು ಹೇಳುವುದು ಮತ್ತು ಅವನನ್ನೇ ಸ್ತುತಿಸುವುದು ಅವರ ಪಾಲಿಗೆ ತೀವ್ರ ಅಸಮಾಧಾನವನ್ನುಂಟು ಮಾಡುತ್ತದೆ. "ಇವನೊಬ್ಬ ವಿಚಿತ್ರ ವ್ಯಕ್ತಿ. ಇವನ ಪ್ರಕಾರ ಪರೋಕ್ಷದ ಜ್ಞಾನವಿರುವುದು ಅಲ್ಲಾಹನಿಗೆ ಮಾತ್ರ, ಪರಮಾಧಿಕಾರವಿರುವುದು ಅಲ್ಲಾಹನಿಗೆ ಮಾತ್ರ, ಅಧಿಕಾರ ಉಳ್ಳವನು ಅಲ್ಲಾಹನು ಮಾತ್ರ. ಹಾಗಾದರೆ ನಮಗೆ ಸಂತಾನ ಭಾಗ್ಯ ದೊರಕುವ, ರೋಗ ಶಮನವಾಗುವ, ವ್ಯಾಪಾರಗಳು ವೃದ್ಧಿಸುವ ಮತ್ತು ಇಷ್ಟಾರ್ಥ ಪೂರ್ತಿಯಾಗುವ ಪೀಠಗಳಿಗೆ ಯಾವುದೇ ಬೆಲೆಯೇ ಇಲ್ಲವೇ?" ಎಂದು ಅವರು ಕೇಳುತ್ತಿದ್ದರು.

47. ಅವರು ಕಿವಿಗೊಟ್ಟು ನಿಮ್ಮ ಮಾತನ್ನಾಲಿಸುವಾಗ ನಿಜಕ್ಕೂ ಅವರು ಏನನ್ನಾಲಿಸುತ್ತಾರೆಂಬುದೂ ಕುಳಿತು ಪರಸ್ಪರ ಗುಪ್ತ ಮಾತುಗಳನ್ನಾಡುತ್ತಿರುವಾಗ ಏನು ಹೇಳುತ್ತಾರೆಂಬುದೂ ನಮಗೆ ಗೊತ್ತಿದೆ. ನೀವು ಹಿಂಬಾಲಿಸುತ್ತಿರುವ ಈ ವ್ಯಕ್ತಿಯು ಓರ್ವ ಮಾಟಬಾಧಿತ ವ್ಯಕ್ತಿಯೆಂದು ಈ ಅಕ್ರಮಿಗಳು ಪರಸ್ಪರ ಹೇಳಿಕೊಳ್ಳುತ್ತಾರೆ.[22]

نَحْنُ أَعْلَمُ بِمَا يَسْتَمِعُونَ بِهِۦٓ إِذْ
يَسْتَمِعُونَ إِلَيْكَ وَإِذْ هُمْ نَجْوَىٰٓ إِذْ
يَقُولُ ٱلظَّـٰلِمُونَ إِن تَتَّبِعُونَ إِلَّا رَجُلًا
مَّسْحُورًا ﴿٤٧﴾

48. ನೋಡಿರಿ, ಇವರು ನಿಮ್ಮ ಮೇಲೆ ಎಂತಹ ವ್ಯಂಗ್ಯೋಕ್ತಿಗಳನ್ನಾಡುತ್ತಾರೆ. ಇವರು ಪಥಭ್ರಷ್ಟರಾಗಿದ್ದಾರೆ. ಇವರಿಗೆ ದಾರಿ ಕಾಣಿಸುತ್ತಿಲ್ಲ.

ٱنظُرْ كَيْفَ ضَرَبُوا۟ لَكَ ٱلْأَمْثَالَ
فَضَلُّوا۟ فَلَا يَسْتَطِيعُونَ سَبِيلًا ﴿٤٨﴾

49. "ನಾವು ಬರೇ ಎಲುಬುಗಳಾಗಿ ಮತ್ತು ಮಣ್ಣಾಗಿ ಬಿಟ್ಟ ಮೇಲೆ ನಮ್ಮನ್ನು ಮತ್ತೆ ಹೊಸದಾಗಿ ಹುಟ್ಟಿಸಿ ಎಬ್ಬಿಸಲಾಗುವುದೇ?" ಎಂದು ಅವರು ಕೇಳುತ್ತಾರೆ.

وَقَالُوٓا۟ أَءِذَا كُنَّا عِظَـٰمًا وَرُفَـٰتًا أَءِنَّا
لَمَبْعُوثُونَ خَلْقًا جَدِيدًا ﴿٤٩﴾

50. ಅವರೊಡನೆ ಹೇಳಿರಿ- "ನೀವು ಶಿಲೆ ಅಥವಾ ಕಬ್ಬಿಣವೇ ಆಗಿ ಹೋದರೂ-

قُلْ كُونُوا۟ حِجَارَةً أَوْ حَدِيدًا ﴿٥٠﴾

51. ಅಥವಾ ಅದಕ್ಕಿಂತ ಹೆಚ್ಚು ಕಠಿಣವಾಗಿದ್ದು ನಿಮ್ಮ ಊಹೆಯಂತೆ ಜೀವವನ್ನು ಸ್ವೀಕರಿಸುವುದೇ ಅಸಂಭವನೀಯವಾಗಿರುವಂತಹ ವಸ್ತುವಾಗಿ ಬಿಟ್ಟರೂ, (ನೀವು ಎಬ್ಬಿಸಲ್ಪಟ್ಟೇ ತೀರುವಿರಿ)" "ನಮ್ಮನ್ನು ಪುನಃ ಜೀವಂತಗೊಳಿಸುವವನಾರು?" ಎಂದು ಅವರು ಖಂಡಿತ ಕೇಳುವರು. "ನಿಮ್ಮನ್ನು ಪ್ರಥಮ ಬಾರಿ ಸೃಷ್ಟಿಸಿದವನೇ" ಎಂದು ಉತ್ತರ ಕೊಡಿರಿ. ಅವರು ತಲೆಯಾಡಿಸುತ್ತ[23] "ಓಹೋ! ಇದೆಲ್ಲಾ ಆಗುವುದು ಯಾವಾಗ?" ಎಂದು ಕೇಳುವರು. ನೀವು ಹೇಳಿರಿ, "ಆ ಸಮಯ ಸನ್ನಿಹಿತವಾಗಿರಲೂ ಬಹುದು.

أَوْ خَلْقًا مِّمَّا يَكْبُرُ فِى صُدُورِكُمْ ۚ
فَسَيَقُولُونَ مَن يُعِيدُنَا ۖ قُلِ ٱلَّذِى
فَطَرَكُمْ أَوَّلَ مَرَّةٍ ۚ فَسَيُنْغِضُونَ إِلَيْكَ
رُءُوسَهُمْ وَيَقُولُونَ مَتَىٰ هُوَ ۖ قُلْ
عَسَىٰٓ أَن يَكُونَ قَرِيبًا ﴿٥١﴾

52. ಅವನು ನಿಮ್ಮನ್ನು ಕೂಗಿ ಕರೆಯುವಂದು ನೀವು ಅವನನ್ನು

يَوْمَ يَدْعُوكُمْ فَتَسْتَجِيبُونَ بِحَمْدِهِۦ

22. ಮಕ್ಕಾದ ಸತ್ಯನಿಷೇಧಿಗಳ ಅವಸ್ಥೆ ಹೇಗಿತ್ತೆಂದರೆ ಅವರು ಕದ್ದು ಕುರ್‍ಆನ್ ಕೇಳುತ್ತಿದ್ದರು ಮತ್ತು ಅದನ್ನು ಯಾವ ರೀತಿ ಪ್ರತಿರೋಧಿಸುವುದು ಎಂಬ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಕೆಲವೊಮ್ಮೆ ಅವರಿಗೆ ತಮ್ಮವರ ಬಗ್ಗೆಯೇ ಇವನು ಕುರ್‍ಆನನ್ನು ಕೇಳಿ ಸ್ವಲ್ಪ ಪ್ರಭಾವಿತನಾದವನಂತಿದೆ ಎಂಬ ಸಂಶಯ ಉಂಟಾಗುತ್ತಿತ್ತು. ಆದ್ದರಿಂದ ಅವರೆಲ್ಲ ಸೇರಿ ಅವನಿಗೆ ತಿಳಿ ಹೇಳುತ್ತಿದ್ದರು, "ನೀನು ಯಾರ ಬಲೆಗೆ ಬಿದ್ದಿರುವೆ? ಅವನಾದರೋ ಒಬ್ಬ ಮಾಟಕ್ಕೀಡಾದವನಾಗಿದ್ದಾನೆ. ಯಾರೋ ಶತ್ರುಗಳು ಅವನಿಗೆ ಮಾಟ ಮಾಡಿದ್ದಾರೆ. ಆದ್ದರಿಂದ ಏನೇನೋ ಮಾತನಾಡ ತೊಡಗಿದ್ದಾನೆ" ಎನ್ನುತ್ತಿದ್ದರು.

23. 'ಇನ್‌ಗಾಝ್' ಎಂದರೆ ತಲೆಯನ್ನು ಮೇಲಿನಿಂದ ಕೆಳಕ್ಕೆ ಮತ್ತು ಕೆಳಗಿನಿಂದ ಮೇಲಕ್ಕೆ ಅಲುಗಾಡಿಸುವುದಾಗಿದೆ. ಆಶ್ಚರ್ಯ ಪ್ರಕಟಣೆಗೆ ಅಥವಾ ಅಪಹಾಸ್ಯಕ್ಕಾಗಿ ತಲೆಯಲ್ಲಾಡಿಸುವಂತೆ ಅಲುಗಾಡಿಸುವುದು.

وَتَظُنُّونَ إِن لَّبِثْتُمْ إِلَّا قَلِيلًا ﴿٥٢﴾

ಪ್ರಶಂಸಿಸುತ್ತಾ ಅವನ ಕರೆಗೆ ಓಗೊಟ್ಟು ಹೊರಟು ಬರುವಿರಿ. ಆಗ ನಾವೇನೋ ತುಸು ಹೊತ್ತು ಮಾತ್ರವೇ ಈ ಅವಸ್ಥೆಯಲ್ಲಿ ಬಿದ್ದುಕೊಂಡಿದ್ದೆವೆಂದು ಊಹಿಸುವಿರಿ."[24]

وَقُل لِّعِبَادِي يَقُولُوا الَّتِي هِيَ أَحْسَنُ ۚ إِنَّ الشَّيْطَانَ يَنزَغُ بَيْنَهُمْ ۚ إِنَّ الشَّيْطَانَ كَانَ لِلْإِنسَانِ عَدُوًّا مُّبِينًا ﴿٥٣﴾

53. ಓ ಪೈಗಂಬರರೇ! ನನ್ನ ದಾಸರೊಡನೆ, ಬಾಯಿಯಿಂದ ಅತ್ಯುತ್ತಮ ಮಾತನ್ನೇ ಹೊರಡಿಸಲು ಹೇಳಿರಿ.[25] ವಾಸ್ತವದಲ್ಲಿ ಶೈತಾನನು ಮಾನವರ ನಡುವೆ ಪಿತೂರಿ ನಡೆಸಲು ಯತ್ನಿಸುತ್ತಾನೆ. ವಸ್ತುತಃ ಶೈತಾನ್ ಮಾನವನ ಪ್ರತ್ಯಕ್ಷ ಶತ್ರು.

رَّبُّكُمْ أَعْلَمُ بِكُمْ ۖ إِن يَشَأْ يَرْحَمْكُمْ أَوْ إِن يَشَأْ يُعَذِّبْكُمْ ۚ وَمَا أَرْسَلْنَاكَ عَلَيْهِمْ وَكِيلًا ﴿٥٤﴾

54. ನಿಮ್ಮ ಪ್ರಭು ನಿಮ್ಮ ಪರಿಸ್ಥಿತಿಯನ್ನು ಚೆನ್ನಾಗಿ ಬಲ್ಲನು. ಅವನು ಇಷ್ಟಪಟ್ಟರೆ ನಿಮ್ಮ ಮೇಲೆ ಕೃಪೆ ತೋರಬಹುದು. ಇಷ್ಟಪಟ್ಟರೆ ಶಿಕ್ಷಿಸಲೂ ಬಹುದು.[26] ಓ ಪೈಗಂಬರರೇ! ನಾವು ನಿಮ್ಮನ್ನು ಜನರ ಮೇಲೆ ಕೊತ್ವಾಲರಾಗಿ ಮಾಡಿ ಕಳುಹಿಸಿಲ್ಲ.

وَرَبُّكَ أَعْلَمُ بِمَن فِي السَّمَاوَاتِ وَالْأَرْضِ ۗ وَلَقَدْ فَضَّلْنَا بَعْضَ النَّبِيِّينَ عَلَىٰ بَعْضٍ ۖ وَآتَيْنَا دَاوُودَ زَبُورًا ﴿٥٥﴾

55. ನಿಮ್ಮ ಪ್ರಭು ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಸೃಷ್ಟಿಗಳನ್ನು ಚೆನ್ನಾಗಿ ಅರಿಯುತ್ತಾನೆ. ನಾವು ಕೆಲವು ಪ್ರವಾದಿಗಳಿಗೆ ಬೇರೆ ಕೆಲವರಿಗಿಂತ ಹಿರಿಯ ಸ್ಥಾನಗಳನ್ನು ನೀಡಿದ್ದೆವು. ದಾವೂದರಿಗೆ ಝುಬೂರನ್ನು ನಾವೇ ಕೊಟ್ಟಿದ್ದೆವು.

قُلِ ادْعُوا الَّذِينَ زَعَمْتُم مِّن دُونِهِ فَلَا يَمْلِكُونَ كَشْفَ الضُّرِّ عَنكُمْ وَلَا تَحْوِيلًا ﴿٥٦﴾

56. ಇವರೊಡನೆ ಹೇಳಿರಿ, "ನೀವು ಯಾರನ್ನು ಅಲ್ಲಾಹನ ಹೊರತು (ನಿಮ್ಮ ಕಾರ್ಯ ಸಾಧಕರೆಂದು) ತಿಳಿಯುತ್ತೀರೋ ಅವರನ್ನು ಪ್ರಾರ್ಥಿಸಿ ನೋಡಿರಿ. ಅವರು ನಿಮ್ಮ ಯಾವ ಸಂಕಷ್ಟವನ್ನೂ ನೀಗಿಸಲಾರರು ಮತ್ತು ಬದಲಿಸಲಾರರು."[27]

24. ಅರ್ಥಾತ್- ಲೋಕದಲ್ಲಿ ನಿಧನನಾದಂದಿನಿಂದ ನಿರ್ಣಾಯಕ ದಿನದ ಪುನರುತ್ಥಾನದ ತನಕದ ಅವಧಿ, ನಿಮಗೆ ಕೆಲವೇ ಗಂಟೆಗಳಂತೆ ಭಾಸವಾಗುವುದು. ನಾವು ಸ್ವಲ್ಪ ಹೊತ್ತು ನಿದ್ರೆಯಲ್ಲಿ ಬಿದ್ದು ಕೊಂಡಿದ್ದೆವು. ಇದ್ದಕ್ಕಿದ್ದಂತೆ 'ಮಹ್‌ಷರ್'ನ ಸದ್ದುಗದ್ದಲ ನಮ್ಮನ್ನು ಎಚ್ಚರಗೊಳಿಸಿತು ಎಂದು ನೀವು ಭಾವಿಸುವಿರಿ.

25. ಅರ್ಥಾತ್- ಎದುರಾಳಿಗಳು ಎಷ್ಟು ಅರೋಚಕ ಮಾತುಗಳನ್ನಾಡಿದರೂ ಮುಸ್ಲಿಮರು ಸತ್ಯಕ್ಕೆ ವಿರುದ್ಧವಾದ ಯಾವುದೇ ಮಾತನ್ನು ನಾಲಗೆಯಿಂದ ಹೊರಡಿಸಬಾರದು. ಸಿಟ್ಟಿನಿಂದ ನಿಯಂತ್ರಣ ಕಳಕೊಂಡು ನಿರರ್ಥಕ ಮಾತುಗಳಿಗೆ ನಿರರ್ಥಕ ಮಾತುಗಳ ಮೂಲಕವೇ ಉತ್ತರ ನೀಡಬಾರದು. ಶಾಂತಚಿತ್ತದಿಂದ ಸಂತುಲಿತವಾದ, ಸತ್ಯದಿಂದ ಕೂಡಿದ ಮತ್ತು ತನ್ನ ಸಂದೇಶದ ಘನತೆಗೆ ತಕ್ಕುದಾದ ಮಾತುಗಳನ್ನೇ ಅವರು ಆಡಬೇಕು.

26. ಅರ್ಥಾತ್- ಸತ್ಯವಿಶ್ವಾಸಿಗಳ ಬಾಯಿಯಿಂದ ಎಂದೂ ನಾವು ಸ್ವರ್ಗಕ್ಕೆ ಅರ್ಹರಾದವರು ಮತ್ತು ಇಂತಹವನು ಅಥವಾ ಇಂತಹ ಗುಂಪಿಗೆ ಸೇರಿದವರು ನರಕಕ್ಕೆ ಅರ್ಹರಾದವರು ಎಂಬ ಮಾತು ಹೊರಡಬಾರದು. ಅದನ್ನು ನಿರ್ಧರಿಸುವ ಅಧಿಕಾರ ಅಲ್ಲಾಹನ ಬಳಿಯಿದೆ. ಅವನು ಎಲ್ಲಾ ಮಾನವರ ಅಂತರಂಗ-ಬಹಿರಂಗ ಮತ್ತು ವರ್ತಮಾನ ಭವಿಷ್ಯಗಳನ್ನು ಬಲ್ಲವನಾಗಿದ್ದಾನೆ. ಯಾರ ಮೇಲೆ ಅನುಗ್ರಹ ತೋರಬೇಕು ಮತ್ತು ಯಾರಿಗೆ ಶಿಕ್ಷೆ ನೀಡಬೇಕು ಎಂಬುದನ್ನೂ ಅವನೇ ತೀರ್ಮಾನಿಸಬೇಕಾಗಿದೆ. ತಾತ್ವಿಕವಾಗಿ ಅಲ್ಲಾಹನ ಗ್ರಂಥದ ಆಧಾರದಲ್ಲಿ ಯಾವ ರೀತಿಯ ಮಾನವರು ಅನುಗ್ರಹಕ್ಕೆ ಅರ್ಹರು ಮತ್ತು ಯಾರು ಶಿಕ್ಷೆಗೆ ಅರ್ಹರು ಎಂದು ಮುಸ್ಲಿಮನಾದ ಓರ್ವ ವ್ಯಕ್ತಿ ಹೇಳಬಹುದಾಗಿದೆ. ಆದರೆ ಇಂತಹವನಿಗೆ ಶಿಕ್ಷೆ ನೀಡಲಾಗುವುದು ಮತ್ತು ಇಂತಹವನು ಪಾಪವಿಮೋಚಿತನಾಗುವನು ಎಂದು ಹೇಳುವ ಅಧಿಕಾರ ಯಾರಿಗೂ ಇಲ್ಲ.

57. ಇವರು ಯಾರನ್ನು ಪ್ರಾರ್ಥಿಸುತ್ತಿರುವರೋ ಅವರೇ ತಮ್ಮ ಪ್ರಭುವಿನ ಸಾಮಿಪ್ಯ ಹೊಂದಲಿಕ್ಕಾಗಿ ಮತ್ತು ಯಾರು ಅವನಿಗೆ ಹೆಚ್ಚು ನಿಕಟನಾಗುವನೆಂದು 'ಮಾರ್ಗೋಪಾಯ'ವನ್ನರಸುತ್ತಿರುತ್ತಾರೆ ಮತ್ತು ಅವರು ಅವನ ಕೃಪೆಯನ್ನು ಆಶಿಸುವವರೂ ಅವನ ಯಾತನೆಯನ್ನು ಭಯಪಡುವವರೂ ಆಗಿರುತ್ತಾರೆ.[28] ವಾಸ್ತವದಲ್ಲಿ ನಿಮ್ಮ ಪ್ರಭುವಿನ ಯಾತನೆಯು ಭಯಪಡಲು ಅರ್ಹವಾದುದೇ ಆಗಿದೆ.

أُولَٰئِكَ الَّذِينَ يَدْعُونَ يَبْتَغُونَ إِلَىٰ
رَبِّهِمُ الْوَسِيلَةَ أَيُّهُمْ أَقْرَبُ وَيَرْجُونَ
رَحْمَتَهُ وَيَخَافُونَ عَذَابَهُ ۚ إِنَّ عَذَابَ
رَبِّكَ كَانَ مَحْذُورًا ﴿٥٧﴾

58. ನಾವು ಪುನರುತ್ಥಾನದ ದಿನಕ್ಕಿಂತ ಮುಂಚೆ ನಾಶಗೊಳಿಸದಿರುವ ಅಥವಾ ಕಠಿಣ ಯಾತನೆ ಗೊಳಪಡಿಸದಿರುವ ನಾಡೊಂದೂ ಇಲ್ಲ. ಇದು ದಾಖಲೆ ಗ್ರಂಥದಲ್ಲಿ ಲಿಖಿತಗೊಂಡಿದೆ.

وَإِن مِّن قَرْيَةٍ إِلَّا نَحْنُ مُهْلِكُوهَا
قَبْلَ يَوْمِ الْقِيَامَةِ أَوْ مُعَذِّبُوهَا عَذَابًا
شَدِيدًا ۚ كَانَ ذَٰلِكَ فِي الْكِتَابِ مَسْطُورًا ﴿٥٨﴾

59. ಇವರಿಗಿಂತ ಮುಂಚಿನವರು ನಿದರ್ಶನಗಳನ್ನು ಸುಳ್ಳಾಗಿಸಿದ್ದರೆಂಬುದರ ಹೊರತು ಬೇರಾವುದೇ ಕಾರಣವು ನಮ್ಮನ್ನು ಆ ನಿದರ್ಶನಗಳನ್ನು ಕಳುಹಿಸದಂತೆ ತಡೆಯಲಿಲ್ಲ.[29] (ಆ ಪ್ರಕಾರ ನೋಡಿರಿ) ನಾವು ಸಮೂದರಿಗೆ ಬಹಿರಂಗವಾಗಿ ಒಂದು ಒಂಟೆಯನ್ನು ನೀಡಿದೆವು. ಅವರು ಅದರ ಮೇಲೆ ಅಕ್ರಮವೆಸಗಿದರು. ನಾವು ನಿದರ್ಶನಗಳನ್ನು ಕಳುಹಿಸುವುದು ಜನರು ಅವುಗಳನ್ನು ಕಂಡು ಭಯಪಡಬೇಕೆಂದೇ ತಾನೆ.

وَمَا مَنَعَنَا أَن نُّرْسِلَ بِالْآيَاتِ إِلَّا أَن
كَذَّبَ بِهَا الْأَوَّلُونَ ۚ وَآتَيْنَا ثَمُودَ
النَّاقَةَ مُبْصِرَةً فَظَلَمُوا بِهَا ۚ وَمَا نُرْسِلُ
بِالْآيَاتِ إِلَّا تَخْوِيفًا ﴿٥٩﴾

60. ಓ ಪೈಗಂಬರರೇ! ನಿಮ್ಮ ಪ್ರಭು ಇವರನ್ನು ಸುತ್ತುವರಿದಿದ್ದಾನೆಂದು ನಾವು ನಿಮ್ಮೊಡನೆ ಹೇಳಿದ್ದುದನ್ನು ಸ್ಮರಿಸಿರಿ. ಈಗಾಗಲೇ ನಾವು ನಿಮಗೆ ತೋರಿಸಿದುದನ್ನೂ[30] ಕುರ್‌ಆನಿನಲ್ಲಿ ಶಪಿಸಿರುವ ಆ

وَإِذْ قُلْنَا لَكَ إِنَّ رَبَّكَ أَحَاطَ بِالنَّاسِ ۚ
وَمَا جَعَلْنَا الرُّؤْيَا الَّتِي أَرَيْنَاكَ إِلَّا فِتْنَةً

27. ಅಲ್ಲಾಹೇತರರಿಗೆ ಸಾಷ್ಟಾಂಗವೆರಗುವುದು ಮಾತ್ರವಲ್ಲ, ಅಲ್ಲಾಹೇತರ ಶಕ್ತಿಗಳೊಂದಿಗೆ ಪ್ರಾರ್ಥಿಸುವುದು ಅಥವಾ ಸಹಾಯಕ್ಕಾಗಿ ಅವರೊಡನೆ ಯಾಚಿಸುವುದು ಕೂಡ ಬಹುದೇವಾರಾಧನೆಯಾಗಿದೆ ಎಂದು ಇದರಿಂದ ವ್ಯಕ್ತವಾಗುತ್ತದೆ.

28. ಈ ಪದಗಳಿಂದ ವ್ಯಕ್ತವಾಗುವುದೇನೆಂದರೆ ಇಲ್ಲಿ ಪ್ರಸ್ತಾಪಿಸಲಾಗಿರುವ ಬಹುದೇವಾರಾಧಕರ ಆರಾಧ್ಯರು ಮತ್ತು ಸಂಕಟಹರರು ಕಲ್ಲಿನ ಮೂರ್ತಿಗಳಲ್ಲ. ಬದಲಾಗಿ ದೇವಚರರೋ ಗತ ಮಹಾಪುರುಷರೋ ಆಗಿದ್ದಾರೆ.

29. ಪ್ರವಾದಿ ಮುಹಮ್ಮದ್‌ರು(ಸ) ಯಾವುದಾದರೂ ಪವಾಡವನ್ನು ತೋರಿಸಬೇಕೆಂಬ ಸತ್ಯನಿಷೇಧಿಗಳ ಬೇಡಿಕೆಗೆ ಇಲ್ಲಿ ಉತ್ತರ ಕೊಡಲಾಗಿದೆ. ಅಂತಹ ಪವಾಡವನ್ನು ನೋಡಿದ ಬಳಿಕವೂ ಜನರು ಅದನ್ನು ಸುಳ್ಳಾಗಿಸಿದರೆ ಅವರ ಮೇಲೆ ಯಾತನೆಯನ್ನು ಎರಗಿಸುವುದು ಅನಿವಾರ್ಯವಾಗುತ್ತದೆ. ಅಂತಹ ಸಮುದಾಯವನ್ನು ನಾಶಗೊಳಿಸದೇ ಬಿಡಲಾಗುವುದಿಲ್ಲ. ಆದ್ದರಿಂದ ಅಲ್ಲಾಹನು ಇಲ್ಲಿ, "ಪವಾಡವನ್ನು ಕಳುಹಿಸದೇ ಇರುವುದು ಮಹಾ ಅನುಗ್ರಹವಾಗಿದೆ. ಆದರೆ ನೀವಾದರೋ ಮೂರ್ಖರು, ಪವಾಡವನ್ನು ಬಯಸುವ ಮೂಲಕ ಸಮೂದ್ ಗೋತ್ರದಂತಹ ದುರ್ಗತಿಯನ್ನೆದುರಿಸಲು ಹೊರಟಿರುವಿರಿ" ಎಂದು ಹೇಳುತ್ತಿದ್ದಾನೆ.

30. ಇದು 'ಮಿಅ್‌ರಾಜ್'ನ ಕಡೆಗಿರುವ ಸೂಚನೆ. ಇಲ್ಲಿ 'ರುಅ್‌ಯಾ' ಎಂಬ ಪದ 'ಕನಸು' ಎಂಬುದರ ಬದಲು 'ಪ್ರತ್ಯಕ್ಷದರ್ಶನ' ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ.

ವೃಕ್ಷವನ್ನೂ[31] ನಾವು ಅವರಿಗೊಂದು ಪರೀಕ್ಷಾ ಸಾಧನವನ್ನಾಗಿ ಮಾಡಿ ಬಿಟ್ಟೆವು.[32] ನಾವು ಅವರಿಗೆ ಎಚ್ಚರಿಕೆಯ ಮೇಲೆ ಎಚ್ಚರಿಕೆ ಕೊಡುತ್ತಲೇ ಇದ್ದೇವೆ. ಆದರೆ, ಪ್ರತಿಯೊಂದು ಎಚ್ಚರಿಕೆಯು ಅವರ ಉದ್ಧಟತನವನ್ನು ವೃದ್ಧಿಸುತ್ತಲೇ ಹೋಗುತ್ತಿದೆ.

لِّلنَّاسِ وَالشَّجَرَةَ الْمَلْعُونَةَ فِي الْقُرْآنِ ۚ وَنُخَوِّفُهُمْ فَمَا يَزِيدُهُمْ إِلَّا طُغْيَانًا كَبِيرًا ﴿٦٠﴾

61. ಸ್ಮರಿಸಿರಿ- "ಆದಮರಿಗೆ ಸಾಷ್ಟಾಂಗವೆರಗಿರಿ" ಎಂದು ನಾವು ದೇವ ಚರರೊಡನೆ ಹೇಳಿದಾಗ ಎಲ್ಲರೂ ಸಾಷ್ಟಾಂಗವೆರಗಿದರು. ಆದರೆ ಇಬ್‌ಲೀಸನು ಎರಗಲಿಲ್ಲ. ಅವನು "ನೀನು ಮಣ್ಣಿನಿಂದ ಸೃಷ್ಟಿಸಿದವನ ಮುಂದೆ ನಾನು ಎರಗಬೇಕೇ?" ಎಂದು ಕೇಳಿದನು.

وَإِذْ قُلْنَا لِلْمَلَائِكَةِ اسْجُدُوا لِآدَمَ فَسَجَدُوا إِلَّا إِبْلِيسَ قَالَ أَأَسْجُدُ لِمَنْ خَلَقْتَ طِينًا ﴿٦١﴾

62. ಮತ್ತು ಮುಂದುವರಿಯುತ್ತ "ನೀನೇ ನೋಡು; ಇವನು ನನಗಿಂತ ಅಧಿಕ ಶ್ರೇಷ್ಠತೆ ನೀಡಲ್ಪಡಲು ಅರ್ಹನಿದ್ದನೇ? ನೀನು ನನಗೆ ಪುನರುತ್ಥಾನದ ದಿನದ ವರೆಗೆ ಕಾಲಾವಕಾಶಕೊಟ್ಟರೆ ನಾನು ಇವನ ಸಂಪೂರ್ಣ ಸಂತತಿಯನ್ನೇ ಮೂಲೋತ್ಪಾಟನೆಗೊಳಿಸಿಬಿಡುವೆನು. ಕೇವಲ ಕೆಲವರು ಮಾತ್ರ ನನ್ನಿಂದ ಪಾರಾಗಬಲ್ಲರು" ಎಂದು ಹೇಳಿದನು.

قَالَ أَرَأَيْتَكَ هَٰذَا الَّذِي كَرَّمْتَ عَلَيَّ لَئِنْ أَخَّرْتَنِ إِلَىٰ يَوْمِ الْقِيَامَةِ لَأَحْتَنِكَنَّ ذُرِّيَّتَهُ إِلَّا قَلِيلًا ﴿٦٢﴾

63. ಆಗ ಅಲ್ಲಾಹನು ಹೇಳಿದನು, "ಹಾಗಿದ್ದರೆ ನಡೆ. ಅವರ ಪೈಕಿ ಯಾರೆಲ್ಲ ನಿನ್ನನ್ನು ಅನುಸರಿಸುವರೋ ನಿನ್ನ ಸಹಿತ ಅವರೆಲ್ಲರಿಗೂ ನರಕವೇ ಪರಿಪೂರ್ಣ ಫಲ.

قَالَ اذْهَبْ فَمَن تَبِعَكَ مِنْهُمْ فَإِنَّ جَهَنَّمَ جَزَاؤُكُمْ جَزَاءً مَّوْفُورًا ﴿٦٣﴾

64. ನಿನ್ನ ಆಹ್ವಾನದಿಂದ ಯಾರು ಯಾರನ್ನೆಲ್ಲ ಪುಸಲಾಯಿಸಲು ನಿನ್ನಿಂದ ಸಾಧ್ಯವಿದೆಯೋ ಪುಸಲಾಯಿಸಿಕೋ. ಅವರ ಮೇಲೆ ನಿನ್ನ ಸವಾರರನ್ನೂ ಕಾಲಾಳುಗಳನ್ನೂ ಏರಿಸಿ ತಾ. ಸಂಪತ್ತು ಮತ್ತು ಸಂತಾನಗಳಲ್ಲಿ ಅವರೊಂದಿಗೆ ಭಾಗಿಯಾಗು ಮತ್ತು ಅವರನ್ನು ವಾಗ್ದಾನಗಳ ಜಾಲದಲ್ಲಿ ಸಿಲುಕಿಸು. ಶೈತಾನನ ವಾಗ್ದಾನಗಳು ಒಂದು ವಂಚನೆಯ ವಿನಾ ಇನ್ನೇನೂ ಅಲ್ಲ.

وَاسْتَفْزِزْ مَنِ اسْتَطَعْتَ مِنْهُم بِصَوْتِكَ وَأَجْلِبْ عَلَيْهِم بِخَيْلِكَ وَرَجِلِكَ وَشَارِكْهُمْ فِي الْأَمْوَالِ وَالْأَوْلَادِ وَعِدْهُمْ ۚ وَمَا يَعِدُهُمُ الشَّيْطَانُ إِلَّا غُرُورًا ﴿٦٤﴾

31. ಅರ್ಥಾತ್- 'ಝಕ್ಕೂಮ್.' ಅದು ನರಕದ ತಳದಲ್ಲಿ ಹುಟ್ಟುವುದು ಮತ್ತು ನರಕವಾಸಿಗಳು ಅದನ್ನು ಸೇವಿಸಬೇಕಾಗುವುದು ಎಂದು ಅದರ ಬಗ್ಗೆ ಕುರ್‌ಆನ್ ವಿವರ ನೀಡಿದೆ. ಅದನ್ನು ಶಪಿಸುವುದೆಂದರೆ ಅದು ಅಲ್ಲಾಹನ ಅನುಗ್ರಹದಿಂದ ದೂರ ಇರುವುದಾಗಿದೆ.

32. ಅವರ ಹಿತಕ್ಕಾಗಿಯೇ ನಾವು ನಿಮಗೆ 'ಮಿಅ್‌ರಾಜ್'ನ ದರ್ಶನ ಮಾಡಿಸಿದೆವು. ಆ ಮೂಲಕ ನಿಮ್ಮಂತಹ ಸತ್ಯಸಂಧ ಮತ್ತು ಪ್ರಾಮಾಣಿಕ ಮಾನವನ ಮುಖಾಂತರ ಅವರಿಗೆ ಪರಮಾರ್ಥದ ಜ್ಞಾನ ಲಭಿಸಲಿ, ಅವರು ಎಚ್ಚರಗೊಂಡು ಸನ್ಮಾರ್ಗಕ್ಕೆ ಬರುವಂತಾಗಲಿ ಎಂಬುದು ಅದರ ಉದ್ದೇಶವಾಗಿತ್ತು. ಆದರೆ ಅವರು ತದ್ವಿರುದ್ಧವಾಗಿ ನಿಮ್ಮನ್ನು ಅಪಹಾಸ್ಯ ಮಾಡಿದರು. ಇಲ್ಲಿ ನೀವು ಮಾಡುತ್ತಿರುವ ನಿಷಿದ್ಧ ವಸ್ತುಗಳ ಉಪಭೋಗ ಕೊನೆಯದಾಗಿ ನಿಮಗೆ 'ಝಕ್ಕೂಮ್'ನ ತುತ್ತನ್ನು ಉಣ್ಣುವಂತೆ ಮಾಡುವುದು - ಎಂದು ನಿಮ್ಮ ಮೂಲಕ ನಾವು ಅವರಿಗೆ ಎಚ್ಚರಿಕೆ ಕೊಟ್ಟೆವು. ಇದನ್ನು ಕೇಳಿ ಅವರು ಗೊಳ್ಳೆಂದು ನಗುತ್ತಾ ಹೇಳಿದರು, "ಇವನನ್ನು ಸ್ವಲ್ಪ ನೋಡಿ. ಒಂದೆಡೆ ಇವನು ನರಕದಲ್ಲಿ ಭೀಕರ ಅಗ್ನಿ ಭುಗಿಲೇಳುತ್ತದೆ ಎಂದು ಹೇಳುತ್ತಿದ್ದಾನೆ. ಇನ್ನೊಂದೆಡೆ ಅಲ್ಲಿ ಮರ ಹುಟ್ಟುತ್ತದೆ ಎನ್ನುತ್ತಿದ್ದಾನೆ."

65. ನಿಶ್ಚಯವಾಗಿಯೂ ನನ್ನ ದಾಸರ ಮೇಲೆ ನಿನಗೆ ಅಧಿಕಾರವೇನೂ ಪ್ರಾಪ್ತವಾಗದು ಮತ್ತು ಭರವಸೆಗೆ ನಿನ್ನ ಪ್ರಭುವೇ ಸಾಕು."

إِنَّ عِبَادِي لَيْسَ لَكَ عَلَيْهِمْ سُلْطَانٌ ۚ
وَكَفَىٰ بِرَبِّكَ وَكِيلًا ﴿٦٥﴾

66. ನೀವು ಅವನ ಅನುಗ್ರಹವನ್ನರಸಲಿಕ್ಕಾಗಿ ನಿಮ್ಮ ನಾವೆಯನ್ನು ಸಮುದ್ರದಲ್ಲಿ ನಡೆಸುವವನೇ ನಿಮ್ಮ (ಯಥಾರ್ಥ) ಪ್ರಭು. ವಾಸ್ತವದಲ್ಲಿ ಅವನು ನಿಮ್ಮ ಮೇಲೆ ಕರುಣೆಯುಳ್ಳವನಾಗಿದ್ದಾನೆ.

رَبُّكُمُ الَّذِي يُزْجِي لَكُمُ الْفُلْكَ فِي الْبَحْرِ
لِتَبْتَغُوا مِنْ فَضْلِهِ ۚ إِنَّهُ كَانَ بِكُمْ رَحِيمًا ﴿٦٦﴾

67. ಸಮುದ್ರದಲ್ಲಿ ನಿಮ್ಮ ಮೇಲೆ ಗಂಡಾಂತರವೆರಗುವಾಗ ಅವನೊಬ್ಬನ ಹೊರತು ಇತರ ಯಾರು ಯಾರನ್ನೆಲ್ಲ ನೀವು ಕೂಗಿ ಪ್ರಾರ್ಥಿಸುತ್ತಿದ್ದಿರೋ ಅವರೆಲ್ಲ ಮಾಯವಾಗಿ ಬಿಡುತ್ತಾರೆ. ಆದರೆ ಅವನು ನಿಮ್ಮನ್ನು ರಕ್ಷಿಸಿ ದಡಕ್ಕೆ ಸೇರಿಸಿದಾಗ ನೀವು ಅವನಿಂದ ವಿಮುಖರಾಗುತ್ತೀರಿ. ನಿಜಕ್ಕೂ ಮಾನವನು ಮಹಾ ಕೃತಘ್ನ.

وَإِذَا مَسَّكُمُ الضُّرُّ فِي الْبَحْرِ ضَلَّ مَنْ
تَدْعُونَ إِلَّا إِيَّاهُ ۖ فَلَمَّا نَجَّاكُمْ إِلَى
الْبَرِّ أَعْرَضْتُمْ ۚ وَكَانَ الْإِنْسَانُ كَفُورًا ﴿٦٧﴾

68. ಅಲ್ಲಾಹನು ನಿಮ್ಮನ್ನು ನೆಲದಲ್ಲೇ ಹೂತು ಬಿಡುವನು ಅಥವಾ ನಿಮ್ಮ ಮೇಲೆ ಕಲ್ಲ ಮಳೆಗೆರೆಯುವ ಬಿರುಗಾಳಿಯನ್ನು ಕಳುಹಿಸುವನೆಂಬ ಬಗ್ಗೆ ಮತ್ತು ನೀವು ಅವನಿಂದ ರಕ್ಷಿಸತಕ್ಕ ರಕ್ಷಕನನ್ನು ಪಡೆಯಲಾರಿರಿ ಎಂಬ ಬಗ್ಗೆ ನೀವು ನಿರ್ಭಯರಾಗಿರುವಿರಾ?

أَفَأَمِنْتُمْ أَنْ يَخْسِفَ بِكُمْ جَانِبَ الْبَرِّ
أَوْ يُرْسِلَ عَلَيْكُمْ حَاصِبًا ثُمَّ لَا تَجِدُوا
لَكُمْ وَكِيلًا ﴿٦٨﴾

69. ಅಥವಾ ಅಲ್ಲಾಹನು ನಿಮ್ಮನ್ನು ಮತ್ತೊಂದಾದರೂ ಸಮುದ್ರಕ್ಕೆ ಕೊಂಡು ಹೋಗಿ ನಿಮ್ಮ ಕೃತಘ್ನತೆಯ ಪ್ರತಿಫಲವಾಗಿ ಪ್ರಚಂಡ ಬಿರುಗಾಳಿಯನ್ನು ಕಳುಹಿಸಿ ನಿಮ್ಮನ್ನು ಮುಳುಗಿಸಿ ಬಿಡಬಹುದೆಂಬ ಹಾಗೂ ಅವನೊಡನೆ ನಿಮಗೊದಗಿದ ಈ ಗತಿಯ ಬಗ್ಗೆ ವಿಚಾರಣೆ ನಡೆಸತಕ್ಕವನಾರೂ ನಿಮಗೆ ಸಿಗಲಾರನೆಂಬ ಭೀತಿ ನಿಮಗಿಲ್ಲವೇ?

أَمْ أَمِنْتُمْ أَنْ يُعِيدَكُمْ فِيهِ تَارَةً أُخْرَىٰ
فَيُرْسِلَ عَلَيْكُمْ قَاصِفًا مِنَ الرِّيحِ فَيُغْرِقَكُمْ
بِمَا كَفَرْتُمْ ۙ ثُمَّ لَا تَجِدُوا لَكُمْ عَلَيْنَا
بِهِ تَبِيعًا ﴿٦٩﴾

70. ನಾವು ಆದಮರ ಸಂತತಿಗೆ ಶ್ರೇಷ್ಠತೆಯನ್ನು ಪ್ರದಾನ ಮಾಡಿದ್ದುದೂ ಅವರಿಗೆ ನೆಲ, ಜಲಗಳಲ್ಲಿ ಯಾನಗಳನ್ನು ದಯ ಪಾಲಿಸಿದ್ದುದೂ ಅವರಿಗೆ ಶುದ್ಧ ವಸ್ತುಗಳಿಂದ ಜೀವನಾಧಾರ ನೀಡಿದ್ದುದೂ ನಮ್ಮ ಅನೇಕ ಸೃಷ್ಟಿಗಳ ಮೇಲೆ ಉತ್ಕೃಷ್ಟತೆ ಕೊಡ ಮಾಡಿದುದೂ ನಮ್ಮ ಅನುಗ್ರಹವಾಗಿದೆ.

وَلَقَدْ كَرَّمْنَا بَنِي آدَمَ وَحَمَلْنَاهُمْ فِي
الْبَرِّ وَالْبَحْرِ وَرَزَقْنَاهُمْ مِنَ الطَّيِّبَاتِ
وَفَضَّلْنَاهُمْ عَلَىٰ كَثِيرٍ مِمَّنْ خَلَقْنَا تَفْضِيلًا ﴿٧٠﴾

71. ನಾವು ಪ್ರತಿಯೊಂದು ಮನುಷ್ಯ ಕೂಟವನ್ನೂ ಅದರ ಮುಂದಾಳುವಿನ ಸಹಿತ ಕರೆಯುವ ದಿನದ ಬಗ್ಗೆ ಯೋಚಿಸಿರಿ. ಆಗ ತಮ್ಮ ಕರ್ಮಪತ್ರ ಬಲಗೈಯಲ್ಲಿ ಕೊಡಲ್ಪಟ್ಟವರು ತಮ್ಮ ಕರ್ಮಪತ್ರವನ್ನು ಓದುವರು ಮತ್ತು ಅವರ ಮೇಲೆ ಕಿಂಚಿತ್ತೂ ಅನ್ಯಾಯವಾಗದು.

يَوْمَ نَدْعُو كُلَّ أُنَاسٍ بِإِمَامِهِمْ ۖ فَمَنْ
أُوتِيَ كِتَابَهُ بِيَمِينِهِ فَأُولَٰئِكَ يَقْرَءُونَ
كِتَابَهُمْ وَلَا يُظْلَمُونَ فَتِيلًا ﴿٧١﴾

72. ಇಹಲೋಕದಲ್ಲಿ ಕುರುಡನಾಗಿ ಬಾಳಿದವನು ಪರಲೋಕದಲ್ಲೂ
ಕುರುಡನಾಗಿಯೇ ಇರುವನು. ಮಾತ್ರವಲ್ಲ ಮಾರ್ಗ ಹೊಂದುವು
ದರಲ್ಲಿ ಕುರುಡನಿಗಿಂತಲೂ ಹೆಚ್ಚು ವಿಫಲನಾಗುವನು.

وَمَن كَانَ فِي هَٰذِهِۦٓ أَعْمَىٰ فَهُوَ فِي
ٱلْءَاخِرَةِ أَعْمَىٰ وَأَضَلُّ سَبِيلًا ﴿٧٢﴾

73. ಓ ಪೈಗಂಬರರೇ, ನೀವು ನಮ್ಮ ಹೆಸರಲ್ಲಿ ನಿಮ್ಮ ಕಡೆಯಿಂದ
ಏನನ್ನಾದರೂ ಕೃತಕವಾಗಿ ಸೃಷ್ಟನೆ ಮಾಡಲೆಂದು, ನಿಮ್ಮನ್ನು
ಗೊಂದಲಕ್ಕೆ ಸಿಲುಕಿಸಿ, ನಾವು ನಿಮಗೆ ಅವತೀರ್ಣ ಗೊಳಿಸುತ್ತಿರು
ವುದರಿಂದ ನಿಮ್ಮನ್ನು ತಿರುಗಿಸಿಬಿಡಬೇಕೆಂದು ಅವರು ತಮ್ಮಿಂದಾ
ದಷ್ಟು ಪ್ರಯತ್ನಿಸಿದ್ದಾರೆ. ನೀವು ಹಾಗೆ ಮಾಡುತ್ತಿದ್ದರೆ ಅವರು
ನಿಮ್ಮನ್ನು ತಮ್ಮ ಆಪ್ತ ಮಿತ್ರನಾಗಿ ಮಾಡಿಕೊಳ್ಳುತ್ತಿದ್ದರು.

وَإِن كَادُوا۟ لَيَفْتِنُونَكَ عَنِ ٱلَّذِىٓ
أَوْحَيْنَآ إِلَيْكَ لِتَفْتَرِىَ عَلَيْنَا غَيْرَهُۥ ۖ
وَإِذًا لَّٱتَّخَذُوكَ خَلِيلًا ﴿٧٣﴾

74. ನಾವು ನಿಮ್ಮನ್ನು ಸ್ಥಿರಚಿತ್ತರನ್ನಾಗಿ ಮಾಡದಿರುತ್ತಿದ್ದರೆ ನೀವು
ಅವರ ಕಡೆಗೆ ಅಲ್ಪ ಸ್ವಲ್ಪವಾದರೂ ವಾಲಿ ಬಿಡುತ್ತಿದ್ದಿರಿ.

وَلَوْلَآ أَن ثَبَّتْنَٰكَ لَقَدْ كِدتَّ تَرْكَنُ
إِلَيْهِمْ شَيْـًٔا قَلِيلًا ﴿٧٤﴾

75. ನೀವು ಹಾಗೆ ಮಾಡುತ್ತಿದ್ದರೆ ನಾವು ನಿಮಗೆ ಇಹಲೋಕದಲ್ಲೂ
ಪರಲೋಕದಲ್ಲೂ ಇಮ್ಮಡಿ ಯಾತನೆಯ ಸವಿಯನ್ನುಣಿಸುತ್ತಿ
ದ್ದೆವು. ಅನಂತರ ನೀವು ನಮ್ಮ ವಿರುದ್ಧ ಯಾವ ಸಹಾಯಕನನ್ನೂ
ಪಡೆಯುತ್ತಿರಲಿಲ್ಲ.

إِذًا لَّأَذَقْنَٰكَ ضِعْفَ ٱلْحَيَوٰةِ وَضِعْفَ ٱلْمَمَاتِ
ثُمَّ لَا تَجِدُ لَكَ عَلَيْنَا نَصِيرًا ﴿٧٥﴾

76. ಇವರು ನಿಮ್ಮನ್ನು ಈ ಭೂಭಾಗದಿಂದ ಕಿತ್ತು ಹಾಕಿ ಇಲ್ಲಿಂದ
ಹೊರಕ್ಕಟ್ಟಿ ಬಿಡಲು ಸಜ್ಜಾಗಿದ್ದಾರೆ. ಇವರು ಹೀಗೆ ಮಾಡಿದರೆ
ನಿಮ್ಮ ತರುವಾಯ ಇವರು ಸ್ವತಃ ಇಲ್ಲಿ ಹೆಚ್ಚು ಕಾಲ
ಉಳಿಯಲಾರರು.

وَإِن كَادُوا۟ لَيَسْتَفِزُّونَكَ مِنَ ٱلْأَرْضِ
لِيُخْرِجُوكَ مِنْهَا ۖ وَإِذًا لَّا يَلْبَثُونَ خِلَٰفَكَ
إِلَّا قَلِيلًا ﴿٧٦﴾

77. ಇದು ನಮ್ಮ ಸ್ಥಾಯಿೀ ಕಾರ್ಯ ವಿಧಾನ. ಇದನ್ನು ನಾವು
ನಿಮಗಿಂತ ಮುಂಚೆ ರವಾನಿಸಿದ ಎಲ್ಲ ಸಂದೇಶವಾಹಕರ
ವಿಷಯದಲ್ಲೂ ಬಳಸಿದ್ದೆವು. ನಮ್ಮ ಕಾರ್ಯ ವಿಧಾನದಲ್ಲಿ
ನೀವು ಯಾವ ಬದಲಾವಣೆಯನ್ನೂ ಕಾಣಲಾರಿರಿ.

سُنَّةَ مَن قَدْ أَرْسَلْنَا قَبْلَكَ مِن
رُّسُلِنَا ۖ وَلَا تَجِدُ لِسُنَّتِنَا تَحْوِيلًا ﴿٧٧﴾

78. ಸೂರ್ಯನ ಇಳಿಮುಖಾರಂಭದಿಂದ ನಿಶಾಂಧಕಾರದ ತನಕ[33]

أَقِمِ ٱلصَّلَوٰةَ لِدُلُوكِ ٱلشَّمْسِ إِلَىٰ غَسَقِ

33. ಇದರಲ್ಲಿ 'ಝುಹರ್'ನಿಂದ 'ಇಶಾ'ದ ತನಕದ ನಾಲ್ಕು ನಮಾಝ್‌ಗಳು ಸೇರಿವೆ.

ನಮಾಝನ್ನು ಸಂಸ್ಥಾಪಿಸಿರಿ ಮತ್ತು ಪ್ರಾತಃಕಾಲದ ಕುರ್‌ಆನನ್ನು ರೂಢಿಗೊಳಿಸಿ ಕೊಳ್ಳಿರಿ. ಏಕೆಂದರೆ ಪ್ರಾತಃಕಾಲದ ಕುರ್‌ಆನ್ ಪ್ರಮಾಣಿತವಾಗಿರುತ್ತದೆ.[34]

الَّيْلِ وَقُرْاٰنَ الْفَجْرِ ؕ اِنَّ قُرْاٰنَ الْفَجْرِ كَانَ مَشْهُوْدًا ۝٧٨

79. ಮತ್ತು ರಾತ್ರಿ ಕಾಲದಲ್ಲಿ ತಹಜ್ಜುದ್ ನಿರ್ವಹಿಸಿರಿ.[35] ಇದು ನಿಮಗೆ ಐಚ್ಛಿಕ ಕರ್ಮ ಆಗಿದೆ. ನಿಮ್ಮ ಪ್ರಭು ನಿಮ್ಮನ್ನು ಪ್ರಶಂಸಿತ ಸ್ಥಾನಕ್ಕೆ ತಲುಪಿಸಲೂ ಬಹುದು.[36]

وَمِنَ الَّيْلِ فَتَهَجَّدْ بِهٖ نَافِلَةً لَّكَ ۖ عَسٰٓى اَنْ يَّبْعَثَكَ رَبُّكَ مَقَامًا مَّحْمُوْدًا ۝٧٩

80. "ಓ ನನ್ನ ಪ್ರಭೂ! ನೀನು ನನ್ನನ್ನು ಎಲ್ಲಿಗೆ ಕೊಂಡೊಯ್ಯುವುದಿದ್ದರೂ ಸತ್ಯದೊಂದಿಗೇ ಒಯ್ಯು, ಎಲ್ಲಿಂದ ಹೊರಡಿಸುವುದಿದ್ದರೂ ಸತ್ಯ ಸಹಿತವೇ ಹೊರಡಿಸು ಮತ್ತು ನಿನ್ನ ಕಡೆಯಿಂದ ಒಂದು ಅಧಿಕಾರವನ್ನು ನನಗೆ ನೆರವಾಗಿಸು"[37] ಎಂದು ಪ್ರಾರ್ಥಿಸಿರಿ.

وَقُلْ رَّبِّ اَدْخِلْنِيْ مُدْخَلَ صِدْقٍ وَّاَخْرِجْنِيْ مُخْرَجَ صِدْقٍ وَّاجْعَلْ لِّيْ مِنْ لَّدُنْكَ سُلْطٰنًا نَّصِيْرًا ۝٨٠

81. "ಸತ್ಯ ಬಂದು ಬಿಟ್ಟಿತು. ಮಿಥ್ಯ ಅಳಿದು ಹೋಯಿತು. ಮಿಥ್ಯವು ಅಳಿದು ಹೋಗುವಂತಹದ್ದೇ" ಎಂದು ಘೋಷಿಸಿರಿ.

وَقُلْ جَآءَ الْحَقُّ وَزَهَقَ الْبَاطِلُ ؕ اِنَّ الْبَاطِلَ كَانَ زَهُوْقًا ۝٨١

82. ನಾವು ಈ ಕುರ್‌ಆನಿನ ಅವತರಣಾ ಸರಣಿಯಲ್ಲಿ ವಿಶ್ವಾಸಿಗಳಿಗೆ ಗುಣೌಷಧ ಮತ್ತು ಅನುಗ್ರಹವನ್ನು ಅವತೀರ್ಣಗೊಳಿಸಿರುತ್ತೇವೆ. ಆದರೆ ಅಕ್ರಮಿಗಳಿಗೆ ಅದು ನಷ್ಟದ ವಿನಾ ಇನ್ನಾವುದನ್ನೂ ವರ್ಧಿಸುವುದಿಲ್ಲ.

وَنُنَزِّلُ مِنَ الْقُرْاٰنِ مَا هُوَ شِفَآءٌ وَّرَحْمَةٌ لِّلْمُؤْمِنِيْنَ ۙ وَلَا يَزِيْدُ الظّٰلِمِيْنَ اِلَّا خَسَارًا ۝٨٢

83. ಮಾನವನಿಗೆ ನಾವು 'ಕೊಡುಗೆ'ಯನ್ನು ದಯಪಾಲಿಸಿದಾಗ ಅವನು ಬೀಗುತ್ತಾನೆ ಹಾಗೂ ಬೆನ್ನು ತಿರುಗಿಸಿ ಕೊಳ್ಳುತ್ತಾನೆ ಮತ್ತು ಸ್ವಲ್ಪವೇನಾದರೂ ಕಷ್ಟ ಬಾಧಿಸಿದರೆ ನಿರಾಶನಾಗ ತೊಡಗುತ್ತಾನೆ.

وَاِذَآ اَنْعَمْنَا عَلَى الْاِنْسَانِ اَعْرَضَ وَنَاٰ بِجَانِبِهٖ ۚ وَاِذَا مَسَّهُ الشَّرُّ كَانَ يَـُٔوْسًا ۝٨٣

84. ಓ ಪೈಗಂಬರರೇ, ಅವರೊಡನೆ (ಹೀಗೆ) ಹೇಳಿ ಬಿಡಿರಿ -"ಪ್ರತಿಯೊಬ್ಬನೂ ತನ್ನದೇ ರೀತಿಯಲ್ಲಿ ಕಾರ್ಯವೆಸಗುತ್ತಾನೆ. ನೇರ ಮಾರ್ಗದಲ್ಲಿ ಯಾರಿದ್ದಾನೆ ಎಂಬುದನ್ನು ನಿಮ್ಮ ಪ್ರಭು ಮಾತ್ರ ಚೆನ್ನಾಗಿ ಬಲ್ಲನು."

قُلْ كُلٌّ يَّعْمَلُ عَلٰى شَاكِلَتِهٖ ؕ فَرَبُّكُمْ اَعْلَمُ بِمَنْ هُوَ اَهْدٰى سَبِيْلًا ۝٨٤ ع

34. ಪ್ರಾತಃಕಾಲದ ಕುರ್‌ಆನ್ ಎಂದರೆ ಪ್ರಾತಃಕಾಲದ ನಮಾಝ್‌ನಲ್ಲಿ ಕುರ್‌ಆನ್ ಪಠಿಸುವುದಾಗಿದೆ. ಕುರ್‌ಆನ್ ಪ್ರಮಾಣಿತವಾಗುವುದೆಂದರೆ ದೇವಚರರು ವಿಶೇಷವಾಗಿ ಆ ಬಗ್ಗೆ ಸಾಕ್ಷ್ಯವಹಿಸುತ್ತಾರೆ ಎಂದಾಗಿದೆ. ಏಕೆಂದರೆ ಅದಕ್ಕೊಂದು ವಿಶಿಷ್ಟತೆ ಇದೆ.

35. 'ತಹಜ್ಜುದ್' ಎಂದರೆ ನಿದ್ರೆ ಬಿಟ್ಟು ಏಳುವುದು ಎಂದಾಗಿದೆ. ರಾತ್ರಿಯ ವೇಳೆ ತಹಜ್ಜುದ್ ನಿರ್ವಹಿಸುವುದೆಂದರೆ ರಾತ್ರಿಯ ಒಂದು ಭಾಗ ನಿದ್ರಿಸಿದ ನಂತರ ಮತ್ತೆ ಎದ್ದು ನಮಾಝ್ ಮಾಡುವುದಾಗಿದೆ.

36. ಅರ್ಥಾತ್- ಇಹ-ಪರಗಳಲ್ಲಿ ನೀವು ಸ್ತುತ್ಯರ್ಹ ಜೀವಿಯಾಗುವ ಸ್ಥಾನಕ್ಕೆ ನಿಮ್ಮನ್ನು ತಲಪಿಸಬಹುದು. ಎಲ್ಲೆಡೆಯೂ ನಿಮ್ಮ ಮೇಲೆ ಪ್ರಶಂಸಾವರ್ಷವಾಗುತ್ತಿರಬಹುದು ಮತ್ತು ನೀವು ಶ್ಲಾಘನಾರ್ಹ ವ್ಯಕ್ತಿಯಾಗಿ ಮಾರ್ಪಡಬಹುದು.

37. ಅರ್ಥಾತ್- ಒಂದೋ ಸ್ವತಃ ನನಗೇ ಅಧಿಕಾರವನ್ನು ಕರುಣಿಸು ಅಥವಾ ಯಾವುದಾದರೂ ಸರ್ಕಾರವನ್ನು ನನ್ನ ಸಹಾಯಕನನ್ನಾಗಿ ಮಾಡು. ಆ ಮೂಲಕ ನನಗೆ ಕೆಡುಕುಗಳನ್ನು ಸರಿಪಡಿಸುವ, ಅಶ್ಲೀಲತೆ ಮತ್ತು ಪಾಪಗಳ ಮಹಾಪೂರವನ್ನು ತಡೆಯುವ ಹಾಗೂ ನಿನ್ನ ನ್ಯಾಯದ ಕಾನೂನನ್ನು ಜಾರಿಗೊಳಿಸುವ ಶಕ್ತಿಯನ್ನು ನೀಡು.

85. ಇವರು ನಿಮ್ಮೊಡನೆ 'ರೂಹ್' ಕುರಿತು ಪ್ರಶ್ನಿಸುತ್ತಾರೆ. ಹೇಳಿರಿ- ಈ 'ರೂಹ್' ನನ್ನ ಪ್ರಭುವಿನ ಅಪ್ಪಣೆಯಿಂದ ಬರುತ್ತದೆ. ಆದರೆ ನೀವು ಜ್ಞಾನದ ಅಲ್ಪಾಂಶವನ್ನು ಮಾತ್ರ ಪಡೆದಿರುತ್ತೀರಿ.[38]

وَيَسْـَٔلُونَكَ عَنِ ٱلرُّوحِ ۖ قُلِ ٱلرُّوحُ مِنْ
أَمْرِ رَبِّى وَمَآ أُوتِيتُم مِّنَ ٱلْعِلْمِ
إِلَّا قَلِيلًا ﴿٨٥﴾

86. ಓ ಪೈಗಂಬರರೇ, ನಾವಿಚ್ಛಿಸಿದರೆ 'ದಿವ್ಯವಾಣಿ'ಯ ಮುಖಾಂತರ ನಾವು ನಿಮಗೆ ದಯಪಾಲಿಸಿರುವುದನ್ನೆಲ್ಲಾ ಕಸಿದು ಕೊಳ್ಳುವೆವು. ಅನಂತರ ನೀವು ನಮಗೆ ಎದುರಾಗಿ ಅದನ್ನು ಮರಳಿ ಕೊಡಿಸು ವಂತಹ ಯಾವ ಬೆಂಬಲಿಗನನ್ನೂ ಹೊಂದಲಾರಿರಿ.

وَلَئِن شِئْنَا لَنَذْهَبَنَّ بِٱلَّذِىٓ أَوْحَيْنَآ
إِلَيْكَ ثُمَّ لَا تَجِدُ لَكَ بِهِۦ عَلَيْنَا وَكِيلًا ﴿٨٦﴾

87. ನಿಮಗೆ ದೊರೆತುದೆಲ್ಲವೂ ನಿಮ್ಮ ಪ್ರಭುವಿನ ಕೃಪೆಯಿಂದಲೇ ದೊರೆತಿದೆ. ವಾಸ್ತವದಲ್ಲಿ ನಿಮ್ಮ ಮೇಲೆ ಅವನ ಮಹತ್ತಾದ ಅನುಗ್ರಹವಿದೆ.

إِلَّا رَحْمَةً مِّن رَّبِّكَ ۚ إِنَّ فَضْلَهُۥ كَانَ
عَلَيْكَ كَبِيرًا ﴿٨٧﴾

88. ಹೇಳಿರಿ- "ಮನುಷ್ಯರೂ ಯಕ್ಷರೂ ಎಲ್ಲರೂ ಒಟ್ಟಾಗಿ ಈ ಕುರ್‌ಆನಿನಂತಹ ಒಂದು ವಸ್ತುವನ್ನು ತರಲು ಪ್ರಯತ್ನಿಸಿದರೆ ಅವರೆಲ್ಲರೂ ಪರಸ್ಪರ ಸಹಾಯಕರಾದರೂ ಅವರಿಗೆ ಅದನ್ನು ತರಲಿಕ್ಕಾಗದು."

قُل لَّئِنِ ٱجْتَمَعَتِ ٱلْإِنسُ وَٱلْجِنُّ عَلَىٰٓ
أَن يَأْتُوا۟ بِمِثْلِ هَٰذَا ٱلْقُرْءَانِ لَا يَأْتُونَ
بِمِثْلِهِۦ وَلَوْ كَانَ بَعْضُهُمْ لِبَعْضٍ ظَهِيرًا ﴿٨٨﴾

89. ನಾವು ಈ ಕುರ್‌ಆನಿನಲ್ಲಿ ಜನರಿಗೆ ನಾನಾ ವಿಧಗಳಿಂದ ಬೋಧಿಸಿದೆವು. ಆದರೆ ಹೆಚ್ಚಿನವರು ನಿಷೇಧಿಸುವುದರಲ್ಲೇ ಸ್ಥಿರರಾದರು.

وَلَقَدْ صَرَّفْنَا لِلنَّاسِ فِى هَٰذَا ٱلْقُرْءَانِ
مِن كُلِّ مَثَلٍ فَأَبَىٰٓ أَكْثَرُ ٱلنَّاسِ
إِلَّا كُفُورًا ﴿٨٩﴾

90. ಅವರು ಹೇಳಿದರು, "ನೀವು ನಮಗಾಗಿ ಭೂಮಿಯನ್ನು ಸೀಳಿ ಒಂದು ಚಿಲುಮೆಯನ್ನು ಹರಿಸುವ ವರೆಗೂ ನಾವು ನಿಮ್ಮ ಮಾತನ್ನು ನಂಬಲಾರೆವು.

وَقَالُوا۟ لَن نُّؤْمِنَ لَكَ حَتَّىٰ تَفْجُرَ لَنَا
مِنَ ٱلْأَرْضِ يَنۢبُوعًا ﴿٩٠﴾

38. ಇಲ್ಲಿ 'ರೂಹ್' ಎಂದು ಹೇಳಲಾಗಿರುವುದು ಆತ್ಮದ ಕುರಿತು ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತಿದೆ. ಅರ್ಥಾತ್ ಜನರು ಪ್ರವಾದಿವರ್ಯರೊಡನೆ(ಸ) 'ಜೀವಾತ್ಮ'ದ ಬಗ್ಗೆ ಅದರ ವಾಸ್ತವಿಕತೆ ಏನೆಂದು ಕೇಳಿದ್ದರು. ಅದಕ್ಕೆ ಉತ್ತರವಾಗಿ ಅವರು 'ಅದು ಅಲ್ಲಾಹನ ಆಜ್ಞೆಯಿಂದ ಬರುತ್ತದೆ' ಎಂದು ಹೇಳಿದ್ದರು ಎನ್ನಲಾಗುತ್ತದೆ. ಆದರೆ ವಾಕ್ಸರಣಿಯನ್ನು ಗಮನಿಸಿದರೆ ಇಲ್ಲಿ 'ರೂಹ್' ಎಂದು ಹೇಳಲಾಗಿರುವುದು 'ಪ್ರವಾದಿತ್ವದ ರೂಹ್' ಅರ್ಥಾತ್, ವಹಿಯ ಕುರಿತಾಗಿದೆ ಎಂದು ವ್ಯಕ್ತವಾಗುತ್ತದೆ. ಅನ್ನಹ್ಲ್ ಅಧ್ಯಾಯದ ಸೂಕ್ತ 2, ಅಲ್ ಮೂಮಿನ್ ಸೂಕ್ತ 15, ಅಶ್ಶೂರಃ ಸೂಕ್ತ 52ರಲ್ಲಿಯೂ ಇದೇ ವಿಷಯ ಪ್ರಸ್ತಾಪಿಸಲಾಗಿದೆ. ಪ್ರಾಚೀನ ವಿದ್ವಾಂಸರಲ್ಲಿ ಇಬ್ನ್ ಅಬ್ಬಾಸ್, ಕತಾದಃ, ಹಸನ್ ಬಸ್ರೀ(ರ) ಅವರೂ ಇದನ್ನು ಹೀಗೆಯೇ ವ್ಯಾಖ್ಯಾನಿಸಿದ್ದಾರೆ. ಹಸನ್ ಮತ್ತು ಕತಾದಃರ ವಾಕ್ಯವನ್ನು 'ರೂಹುಲ್ ಮಆನಿ'ಯ ಕರ್ತೃ ಹೀಗೆ ಉಲ್ಲೇಖಿಸಿದ್ದಾರೆ, 'ರೂಹ್' ಎಂದರೆ ಜಿಬ್‌ರೀಲ್(ಅ) ಆಗಿದ್ದಾರೆ. "ಅವರು ಹೇಗೆ ಇಳಿಯುತ್ತಾರೆ ಮತ್ತು ಪ್ರವಾದಿವರ್ಯರ(ಸ) ಹೃದಯದಲ್ಲಿ ಯಾವ ರೀತಿ ವಹೀ ಇಳಿಯುತ್ತದೆ" ಎಂಬುದು ಅವರ ಪ್ರಶ್ನೆಯಾಗಿತ್ತು.

91. ಅಥವಾ ನಿಮಗಾಗಿ ಖರ್ಜೂರಗಳ ಮತ್ತು ದ್ರಾಕ್ಷೆಗಳ ಒಂದು ತೋಟ ಉಂಟಾಗಬೇಕು ಮತ್ತು ನೀವು ಅದರಲ್ಲಿ ಕಾಲುವೆಗಳನ್ನು ಹರಿಸಬೇಕು-

أَوْ تَكُونَ لَكَ جَنَّةٌ مِّن نَّخِيلٍ وَّعِنَبٍ
فَتُفَجِّرَ الْأَنْهَرَ خِلَٰلَهَا تَفْجِيرًا ﴿٩١﴾

92. ಅಥವಾ ನಿಮ್ಮ ವಾದದಂತೆ ಆಕಾಶವನ್ನು ತುಂಡು ತುಂಡಾಗಿ ಮಾಡಿ ನಮ್ಮ ಮೇಲೆ ಬೀಳಿಸಬೇಕು ಇಲ್ಲವೇ ಅಲ್ಲಾಹನನ್ನೂ ದೇವಚರರನ್ನೂ ಮುಖಾಮುಖಿ ನಮ್ಮ ಮುಂದೆ ತರಬೇಕು-

أَوْ تُسْقِطَ السَّمَآءَ كَمَا زَعَمْتَ عَلَيْنَا كِسَفًا
أَوْ تَأْتِيَ بِاللَّهِ وَالْمَلَٰٓئِكَةِ قَبِيلًا ﴿٩٢﴾

93. ಅಥವಾ ನಿಮಗಾಗಿ ಒಂದು ಚಿನ್ನದ ಮನೆ ತಯಾರಾಗಬೇಕು ಅಥವಾ ನೀವು ಆಕಾಶದ ಮೇಲೆ ಏರಬೇಕು. ನೀವು ನಮಗಾಗಿ ನಾವು ಓದಬಹುದಾದ ಒಂದು ಲೇಖನವನ್ನು ತರದಿದ್ದರೆ ನಿಮ್ಮ ಏರುವಿಕೆಯನ್ನೂ ನಾವು ನಂಬಲಾರೆವು"- ಓ ಪೈಗಂಬರರೇ, "ನನ್ನ ಪ್ರಭು ಪರಮ ಪಾವನನು. ನಾನೊಬ್ಬ ಸಂದೇಶ ತರುವ ಮಾನವನಾಗಿರುವೆನಲ್ಲದೆ ಇನ್ನೇನಾದರೂ ಆಗಿರುವೆನೇ?" ಎಂದು ಅವರೊಡನೆ ಕೇಳಿರಿ.

أَوْ يَكُونَ لَكَ بَيْتٌ مِّن زُخْرُفٍ أَوْ تَرْقَىٰ
فِي السَّمَآءِ ۖ وَلَن نُّؤْمِنَ لِرُقِيِّكَ حَتَّىٰ تُنَزِّلَ
عَلَيْنَا كِتَٰبًا نَّقْرَؤُهُ ۗ قُلْ سُبْحَانَ رَبِّي
هَلْ كُنتُ إِلَّا بَشَرًا رَّسُولًا ﴿٩٣﴾

94. ಜನರ ಮುಂದೆ ಸನ್ಮಾರ್ಗದರ್ಶನ ಬಂದಾಗಲೆಲ್ಲ- ಅದರ ಮೇಲೆ ವಿಶ್ವಾಸವಿಡದಂತೆ ಜನರನ್ನು ತಡೆದುದು "ಅಲ್ಲಾಹನು ಸಂದೇಶ ವಾಹಕನಾಗಿ ಮಾನವನನ್ನು ಕಳುಹಿಸಿದನೇ?" ಎಂಬ ಮಾತೇ ವಿನಾ ಇನ್ನೇನೂ ಅಲ್ಲ.

وَمَا مَنَعَ النَّاسَ أَن يُؤْمِنُوٓا إِذْ جَآءَهُمُ
الْهُدَىٰٓ إِلَّآ أَن قَالُوٓا أَبَعَثَ اللَّهُ بَشَرًا رَّسُولًا ﴿٩٤﴾

95. ಭೂಮಿಯ ಮೇಲೆ ದೇವಚರರು ಇಷ್ಟಾನುಸಾರ ನಡೆದಾಡುತ್ತಿದ್ದರೆ ನಾವು ಖಂಡಿತವಾಗಿಯೂ ಆಕಾಶದಿಂದ ಒಬ್ಬ ದೇವಚರನನ್ನೇ ಅವರಿಗೆ ಸಂದೇಶವಾಹಕನನ್ನಾಗಿ ಮಾಡಿ ಕಳುಹಿಸುತ್ತಿದ್ದೆವೆಂದು ಅವರೊಡನೆ ಹೇಳಿರಿ.

قُل لَّوْ كَانَ فِي الْأَرْضِ مَلَٰٓئِكَةٌ يَمْشُونَ
مُطْمَئِنِّينَ لَنَزَّلْنَا عَلَيْهِم مِّنَ السَّمَآءِ
مَلَكًا رَّسُولًا ﴿٩٥﴾

96. ಓ ಪೈಗಂಬರರೇ, ಅವರೊಡನೆ (ಹೀಗೆ) ಹೇಳಿರಿ: "ನನ್ನ ಮತ್ತು ನಿಮ್ಮ ನಡುವೆ ಅಲ್ಲಾಹನ ಸಾಕ್ಷಿಯೊಂದೇ ಸಾಕು. ನಿಜಕ್ಕೂ ಅವನು ತನ್ನ ದಾಸರ ಸ್ಥಿತಿಗತಿಗಳನ್ನು ಚೆನ್ನಾಗಿ ಬಲ್ಲವನಾಗಿದ್ದು ಸರ್ವವನ್ನೂ ವೀಕ್ಷಿಸುತ್ತಿದ್ದಾನೆ."

قُلْ كَفَىٰ بِاللَّهِ شَهِيدًۢا بَيْنِي وَبَيْنَكُمْ ۚ
إِنَّهُۥ كَانَ بِعِبَادِهِۦ خَبِيرًۢا بَصِيرًا ﴿٩٦﴾

97. ಯಾರಿಗೆ ಅಲ್ಲಾಹನು ಮಾರ್ಗದರ್ಶನವೀಯುತ್ತಾನೋ ಅವನೇ ಮಾರ್ಗದರ್ಶನ ಹೊಂದುವವನು ಮತ್ತು ಅವನು ಯಾರನ್ನಾದರೂ ಪಥಭ್ರಷ್ಟಗೊಳಿಸಿದರೆ ಅಂಥವರಿಗೆ ಅವನ ಹೊರತು ಯಾವ ರಕ್ಷಕ ಮಿತ್ರರನ್ನೂ ನೀವು ಪಡೆಯಲಾರಿರಿ. ನಾವು ಇವರನ್ನು

وَمَن يَهْدِ اللَّهُ فَهُوَ الْمُهْتَدِ ۖ وَمَن
يُضْلِلْ فَلَن تَجِدَ لَهُمْ أَوْلِيَآءَ مِن دُونِهِۦ ۖ
وَنَحْشُرُهُمْ يَوْمَ الْقِيَٰمَةِ عَلَىٰ وُجُوهِهِمْ

ಪುನರುತ್ಥಾನದ ದಿನ ಕುರುಡರಾಗಿಯೂ ಮೂಕರಾಗಿಯೂ ಕಿವುಡರಾಗಿಯೂ ಮಾಡಿ, ಇವರ ಮುಖಗಳನ್ನು ನೆಲಕಚ್ಚಿಸುತ್ತಾ ಎಳೆದು ತರುವೆವು. ಅವರ ವಾಸಸ್ಥಳ 'ನರಕ' ಆಗಿದೆ. ಅದರ ಅಗ್ನಿಯು ಮಂದವಾಗ ತೊಡಗಿದಾಗ ನಾವು ಅದನ್ನು ಇನ್ನಷ್ಟು ತೀಕ್ಷ್ಣಗೊಳಿಸುವೆವು.

عُمْيًا وَبُكْمًا وَصُمًّا ۖ مَأْوَاهُمْ جَهَنَّمُ ۖ
كُلَّمَا خَبَتْ زِدْنَاهُمْ سَعِيرًا ﴿٩٧﴾

98. ನಮ್ಮ ಪ್ರತ್ಯಕ್ಷ ಪ್ರಮಾಣಗಳನ್ನು ಧಿಕ್ಕರಿಸಿ "ನಾವು ಎಲುಬುಗಳೂ ಮಣ್ಣೂ ಆಗಿ ಹೋದ ಬಳಿಕ ನಮ್ಮನ್ನು ಹೊಸದಾಗಿ ಸೃಷ್ಟಿಸಿ ಎಬ್ಬಿಸಲಾಗುವುದೇ?" ಎಂದು ಅವರು ಹೇಳಿದುದರ ಪ್ರತಿ ಫಲವಿದು.

ذَٰلِكَ جَزَاؤُهُمْ بِأَنَّهُمْ كَفَرُوا بِآيَاتِنَا
وَقَالُوا أَإِذَا كُنَّا عِظَامًا وَرُفَاتًا أَإِنَّا
لَمَبْعُوثُونَ خَلْقًا جَدِيدًا ﴿٩٨﴾

99. ಆಕಾಶಗಳನ್ನೂ ಭೂಮಿಯನ್ನೂ ಯಾವ ದೇವನು ಸೃಷ್ಟಿಸಿರುತ್ತಾನೋ ಅವನು ಖಂಡಿತವಾಗಿಯೂ ಇವರಂಥವರನ್ನು ಸೃಷ್ಟಿಸಲು ಶಕ್ತನೆಂಬುದು ಇವರಿಗೆ ಹೊಳೆಯಲಿಲ್ಲವೇ? ಅವನು ಇವರನ್ನು ಒಂದೆಡೆ ಸೇರಿಸಲಿಕ್ಕಾಗಿ ಒಂದು ಸಮಯವನ್ನು ನಿಶ್ಚಯಿಸಿಟ್ಟಿದ್ದಾನೆ. ಅದರ ಬರುವಿಕೆಯು ಖಚಿತ. ಆದರೆ ಅದನ್ನು ನಿರಾಕರಿಸಿಯೇ ತೀರುವೆವೆಂಬುದು ಅಕ್ರಮಿಗಳ ಹಟವಾಗಿದೆ.

أَوَلَمْ يَرَوْا أَنَّ اللَّهَ الَّذِي خَلَقَ السَّمَاوَاتِ
وَالْأَرْضَ قَادِرٌ عَلَىٰ أَنْ يَخْلُقَ مِثْلَهُمْ
وَجَعَلَ لَهُمْ أَجَلًا لَا رَيْبَ فِيهِ فَأَبَى
الظَّالِمُونَ إِلَّا كُفُورًا ﴿٩٩﴾

100. ಓ ಪೈಗಂಬರರೇ, ಅವರೊಡನೆ ಹೇಳಿರಿ - "ನನ್ನ ಪ್ರಭುವಿನ ಕೃಪಾ ಭಂಡಾರಗಳು ನಿಮ್ಮ ಸ್ವಾಧೀನದಲ್ಲಿ ಇದ್ದು ಬಿಡುತ್ತಿದ್ದರೆ, ಖರ್ಚಾಗಿ ಹೋದೀತೆಂಬ ಆಶಂಕೆಯಿಂದ ಅವುಗಳನ್ನು ಖಂಡಿತವಾಗಿಯೂ ನೀವು ತಡೆದಿಡುತ್ತಿದ್ದಿರಿ. ನಿಜಕ್ಕೂ ಮಾನವನು ಬಹಳ ಸಂಕುಚಿತ ಮನಸ್ಸಿನವನಾಗಿದ್ದಾನೆ."[39]

قُلْ لَوْ أَنْتُمْ تَمْلِكُونَ خَزَائِنَ رَحْمَةِ
رَبِّي إِذًا لَأَمْسَكْتُمْ خَشْيَةَ الْإِنْفَاقِ ۚ
وَكَانَ الْإِنْسَانُ قَتُورًا ﴿١٠٠﴾

101. ನಾವು ಮೂಸಾರಿಗೆ ಸ್ಪಷ್ಟವಾಗಿ ತೋರುವ ಒಂಭತ್ತು ನಿದರ್ಶನಗಳನ್ನು ದಯಪಾಲಿಸಿದ್ದೆವು.[40] ಇನ್ನು ನೀವೇ ಬನೀಇಸ್ರಾಈಲರೊಡನೆ "ಮೂಸಾರು ಅವರಲ್ಲಿಗೆ ಬಂದಾಗ ಫಿರ್‌ಔನನು ಓ ಮೂಸಾ, ಖಂಡಿತವಾಗಿಯೂ ನೀನೊಬ್ಬ ಮಾಟಬಾಧಿತ ಮನುಷ್ಯ

وَلَقَدْ آتَيْنَا مُوسَىٰ تِسْعَ آيَاتٍ بَيِّنَاتٍ
فَاسْأَلْ بَنِي إِسْرَائِيلَ إِذْ جَاءَهُمْ
فَقَالَ لَهُ فِرْعَوْنُ إِنِّي لَأَظُنُّكَ يَا مُوسَىٰ

39. ಮಕ್ಕಾದ ಬಹುದೇವಾರಾಧಕರು ಮುಹಮ್ಮದ್‌ರ(ಸ) ಪ್ರವಾದಿತ್ವವನ್ನು ನಿರಾಕರಿಸುತ್ತಿದ್ದುದರ ಮನೋವೈಜ್ಞಾನಿಕ ಕಾರಣಗಳಲ್ಲಿ ಆ ಮೂಲಕ ಅವರ ಶ್ರೇಷ್ಠತೆಯನ್ನು ಸಮ್ಮತಿಸಬೇಕಾದೀತು ಎಂಬುದೂ ಒಂದಾಗಿತ್ತು. ತಮ್ಮ ಸಮಕಾಲೀನ ಮತ್ತು ಸಹಜೀವಿಯಾದ ವ್ಯಕ್ತಿಯ ಘನತೆಯನ್ನು ಒಪ್ಪಿಕೊಳ್ಳಲು ಮಾನವ ಸಾಮಾನ್ಯವಾಗಿ ಸನ್ನದ್ಧನಾಗುವುದಿಲ್ಲ. ಇದರ ಕುರಿತೇ, "ಒಬ್ಬನೇ ನೈಜ ಸ್ಥಾನಮಾನದ ಅಂಗೀಕಾರ ಮತ್ತು ಸಮ್ಮತಿಯ ವೇಳೆಯೂ ಅವರ ಮನಸ್ಸು ಮುದುಡುತ್ತದೆ. ಹಾಗಿರುವಾಗ ದೇವನು ತನ್ನ ಅನುಗ್ರಹದ ಚಾವಿಗಳನ್ನು ಅವರ ವಶಕ್ಕೆ ನೀಡಿದರೆ ಅವರು ಯಾರಿಗೂ ಚಿಕ್ಕಾಸನ್ನೂ ನೀಡುತ್ತಿರಲಿಲ್ಲ" ಎಂದು ಹೇಳಲಾಗುತ್ತಿದೆ.

40. ಈ ಒಂಬತ್ತು ದೃಷ್ಟಾಂತಗಳ ವಿವರಗಳು ಅಲ್ ಅಅ್‌ರಾಫ್ ಅಧ್ಯಾಯದಲ್ಲಿ ಬಂದಿದೆ.

مَسْحُورًا ﴿١٠١﴾

ನಾಗಿರುತ್ತೀ ಎಂದು ನಾನು ಶಂಕಿಸುತ್ತೇನೆಂದೇ ಹೇಳಿದ್ದನಷ್ಟೆ?" ಎಂದು ಕೇಳಿರಿ.

قَالَ لَقَدْ عَلِمْتَ مَآ اَنْزَلَ هٰٓؤُلَآءِ اِلَّا رَبُّ السَّمٰوٰتِ وَالْاَرْضِ بَصَآئِرَ ۚ وَاِنِّيْ لَاَظُنُّكَ يٰفِرْعَوْنُ مَثْبُوْرًا ﴿١٠٢﴾

102. ಅದಕ್ಕುತ್ತರವಾಗಿ ಮೂಸಾ ಹೇಳಿದರು, "ಈ ಪ್ರಜ್ಞಾಪೂರ್ಣ ಪ್ರತ್ಯಕ್ಷ ಪ್ರಮಾಣಗಳನ್ನು ಆಕಾಶಗಳ ಮತ್ತು ಭೂಮಿಯ ಪ್ರಭುವಿನ ಹೊರತು ಇನ್ನಾರೂ ಅವತೀರ್ಣಗೊಳಿಸಿಲ್ಲವೆಂದು ನೀನು ಚೆನ್ನಾಗಿ ತಿಳಿದಿರುವೆ.[41] ಓ ಫಿರ್‌ಔನ್! ನನ್ನ ಅಭಿಪ್ರಾಯ ಪ್ರಕಾರ ನೀನೊಬ್ಬ ಹತಭಾಗಿ ಆಗಿರುವೆ."

فَاَرَادَ اَنْ يَّسْتَفِزَّهُمْ مِّنَ الْاَرْضِ فَاَغْرَقْنٰهُ وَمَنْ مَّعَهٗ جَمِيْعًا ﴿١٠٣﴾

103. ಕೊನೆಗೆ ಫಿರ್‌ಔನನು ಮೂಸಾ ಮತ್ತು ಬನೀಇಸ್ರಾಈಲರನ್ನು ಭೂಮುಖದಿಂದ ಕಿತ್ತೆಸೆಯ ಬೇಕೆಂದು ನಿರ್ಧರಿಸಿದನು. ಆದರೆ ನಾವು ಅವನನ್ನೂ ಅವನ ಸಂಗಡಿಗರನ್ನೂ ಒಟ್ಟಾಗಿ ಮುಳುಗಿಸಿ ಬಿಟ್ಟೆವು.

وَّقُلْنَا مِنْ بَعْدِهٖ لِبَنِيْٓ اِسْرَآءِيْلَ اسْكُنُوا الْاَرْضَ فَاِذَا جَآءَ وَعْدُ الْاٰخِرَةِ جِئْنَا بِكُمْ لَفِيْفًا ﴿١٠٤﴾

104. ಆ ಬಳಿಕ ಬನೀಇಸ್ರಾಈಲರೊಡನೆ, "ನೀವಿನ್ನು ಭೂಮಿಯಲ್ಲಿ ನೆಲೆಸಿರಿ. ಮುಂದೆ ಪರಲೋಕದ ವಾಗ್ದಾನದ ಸಮಯ ಬಂದಾಗ ನಾವು ನಿಮ್ಮೆಲ್ಲರನ್ನೂ ಒಟ್ಟಾಗಿ ತಂದು ಹಾಜರು ಪಡಿಸುವೆವು" ಎಂದು ಹೇಳಿದೆವು.

وَبِالْحَقِّ اَنْزَلْنٰهُ وَبِالْحَقِّ نَزَلَ ۗ وَمَآ اَرْسَلْنٰكَ اِلَّا مُبَشِّرًا وَّنَذِيْرًا ﴿١٠٥﴾

105. ನಾವು ಈ ಕುರ್‌ಆನನ್ನು ಸತ್ಯ ಸಹಿತ ಅವತೀರ್ಣಗೊಳಿಸಿರುತ್ತೇವೆ ಮತ್ತು ಇದು ಸತ್ಯಸಹಿತವಾಗಿಯೇ ಅವತೀರ್ಣಗೊಂಡಿದೆ. ಓ ಪೈಗಂಬರರೇ! (ಸ್ವೀಕರಿಸುವವನಿಗೆ) ಸುವಾರ್ತೆ ನೀಡಲಿಕ್ಕಾಗಿ ಮತ್ತು (ನಿರಾಕರಿಸುವವನಿಗೆ) ಎಚ್ಚರಿಕೆ ಕೊಡಲಿಕ್ಕಾಗಿಯೇ ವಿನಾ ಇನ್ನಾವ ಕಾರ್ಯಕ್ಕೂ ನಾವು ನಿಮ್ಮನ್ನು ಕಳುಹಿಸಿರುವುದಿಲ್ಲ.

وَقُرْاٰنًا فَرَقْنٰهُ لِتَقْرَاَهٗ عَلَى النَّاسِ عَلٰى مُكْثٍ وَّنَزَّلْنٰهُ تَنْزِيْلًا ﴿١٠٦﴾

106. ನೀವು ಈ ಕುರ್‌ಆನನ್ನು ಸಂದರ್ಭೋಚಿತವಾಗಿ ಜನರಿಗೆ ಹೇಳಿ ಕೊಡಲಿಕ್ಕಾಗಿ ನಾವಿದನ್ನು ಸ್ವಲ್ಪ ಸ್ವಲ್ಪವಾಗಿ ಅವತೀರ್ಣಗೊಳಿಸಿದ್ದೇವೆ ಮತ್ತು ಇದನ್ನು ನಾವು (ಸಂದರ್ಭಾನುಸಾರ) ಹಂತ ಹಂತವಾಗಿ ಅವತೀರ್ಣಗೊಳಿಸಿದ್ದೇವೆ.

41. ಈ ಮಾತನ್ನು ಹ. ಮೂಸಾ(ಅ) ಹೇಳಲು ಕಾರಣವೇನೆಂದರೆ, ಇಡೀ ರಾಷ್ಟ್ರದಲ್ಲಿ ಕ್ಷಾಮ ಆವರಿಸುವುದು, ಲಕ್ಷಗಟ್ಟಲೆ ಚದರ ಮೈಲುಗಳ ವಿಸ್ತೀರ್ಣದಲ್ಲಿ ಹಬ್ಬಿರುವ ಪ್ರದೇಶದಲ್ಲಿ ಕಪ್ಪೆಗಳ ಹಾವಳಿಯುಂಟಾಗುವುದು, ದೇಶದಾದ್ಯಂತದ ಗೋದಾಮುಗಳಿಗೆ ಕೀಟಬಾಧೆ ಯುಂಟಾಗುವುದೇ ಮುಂತಾದ ಸಾರ್ವತ್ರಿಕ ಸಂಕಷ್ಟಗಳು ಒಬ್ಬ ಜಾದೂಗಾರನ ಜಾದೂ ಅಥವಾ ಮಾನವನ ಚಮತ್ಕಾರ ಶಕ್ತಿಯಿಂದಾಗಿ ಗೋಚರಿಸಲು ಸಾಧ್ಯವಿಲ್ಲ. ಜಾದೂಗಾರ ನಿರ್ದಿಷ್ಟ ಸ್ಥಳದಲ್ಲಿ ಪ್ರೇಕ್ಷಕರ ಕಣ್ಣು ಕಟ್ಟಿ ಅವರಿಗೆ ಕೆಲವು ಚಮತ್ಕಾರಗಳನ್ನು ತೋರಿಸಬಹುದು. ಅವು ವಾಸ್ತವಿಕತೆಗಳಾಗಿರುವುದಿಲ್ಲ, ಬದಲಾಗಿ ಬರೇ ಕಣ್ಣುಕಟ್ಟು ಮಾತ್ರವಾಗಿರುತ್ತವೆ.

107. ಓ ಪೈಗಂಬರರೇ, ಅವರೊಡನೆ ಹೇಳಿರಿ- ನೀವು ಇದರ ಮೇಲೆ ವಿಶ್ವಾಸವಿಟ್ಟರೂ ಇಡದಿದ್ದರೂ ಇದಕ್ಕೆ ಮುಂಚೆ ಜ್ಞಾನ ಕೊಡಲ್ಪಟ್ಟವರಿಗೆ ಇದನ್ನು ಓದಿ ಹೇಳಿದಾಗ ಅವರು ತಲೆಬಾಗಿ ಅಧೋಮುಖಿಗಳಾಗಿ ಸಾಷ್ಟಾಂಗವೆರಗಿ ಬಿಡುತ್ತಾರೆ-

قُلْ اٰمِنُوْا بِهٖۤ اَوْ لَا تُؤْمِنُوْا ؕ اِنَّ الَّذِيْنَ
اُوْتُوا الْعِلْمَ مِنْ قَبْلِهٖۤ اِذَا يُتْلٰى عَلَيْهِمْ
يَخِرُّوْنَ لِلْاَذْقَانِ سُجَّدًا ۙ ﴿۱۰۷﴾

108. ಮತ್ತು "ನಮ್ಮ ಪ್ರಭು ಪರಮಪಾವನನು. ಅವನ ವಾಗ್ದಾನ ಪೂರ್ಣಗೊಳ್ಳಲೇಬೇಕು" ಎಂದು ಉದ್ಗಾರವೆತ್ತುತ್ತಾರೆ.

وَّ يَقُوْلُوْنَ سُبْحٰنَ رَبِّنَاۤ اِنْ كَانَ وَعْدُ
رَبِّنَا لَمَفْعُوْلًا ﴿۱۰۸﴾

109. ಅವರು ಪ್ರಲಾಪಿಸುತ್ತ ಅಧೋಮುಖಿಗಳಾಗಿ ಬಿಡುತ್ತಾರೆ ಮತ್ತು ಇದನ್ನು ಕೇಳಿ ಅವರ ದೀನತಾಭಾವವು ಇನ್ನಷ್ಟು ವರ್ಧಿಸುತ್ತದೆ.

وَ يَخِرُّوْنَ لِلْاَذْقَانِ يَبْكُوْنَ وَ يَزِيْدُهُمْ
خُشُوْعًا ۩ ﴿۱۰۹﴾ السجدة

110. ಓ ಪೈಗಂಬರರೇ, ಇವರೊಡನೆ ಹೇಳಿರಿ! "ಅಲ್ಲಾಹ್ ಎಂದು ಕರೆಯಿರಿ ಅಥವಾ ಪರಮ ದಯಾಮಯ ಎಂದು ಕರೆಯಿರಿ" ಯಾವ ಹೆಸರಿಂದ ಕರೆದರೂ ಅವನಿಗೆ ಎಲ್ಲವೂ ಒಳ್ಳೆಯ ನಾಮಗಳೇ ಇವೆ[42] ಮತ್ತು ನಿಮ್ಮ ನಮಾಝನ್ನು ಬಹಳ ಉಚ್ಚ ಸ್ವರದಲ್ಲಾಗಲಿ ತೀರಾ ಮೆಲುದನಿಯಲ್ಲಾಗಲಿ ನಿರ್ವಹಿಸಬೇಡಿರಿ. ಇವೆರಡರ ನಡುವೆ ಮಧ್ಯಮ ತರದ ಧ್ವನಿಯನ್ನಿರಿಸಿಕೊಳ್ಳಿರಿ.[43]

قُلِ ادْعُوا اللّٰهَ اَوِ ادْعُوا الرَّحْمٰنَ ؕ اَيًّا مَّا
تَدْعُوْا فَلَهُ الْاَسْمَآءُ الْحُسْنٰى ۚ وَ لَا
تَجْهَرْ بِصَلَاتِكَ وَ لَا تُخَافِتْ بِهَا وَ ابْتَغِ
بَيْنَ ذٰلِكَ سَبِيْلًا ﴿۱۱۰﴾

111. ಮತ್ತು ಹೇಳಿರಿ! "ಸರ್ವಸ್ತುತಿಗಳೂ ಅಲ್ಲಾಹನಿಗೇ ಮೀಸಲು. ಅವನು ಯಾರನ್ನೂ ಮಗನನ್ನಾಗಿ ಮಾಡಿಕೊಳ್ಳಲಿಲ್ಲ. ಅವನ ಪ್ರಭುತ್ವದಲ್ಲಿ ಯಾರೂ ಸಹಭಾಗಿಯಿಲ್ಲ. ಅವನಿಗೊಬ್ಬ ರಕ್ಷಕ ಮಿತ್ರನಿದ್ದಾನೆನ್ನಲು ಅವನೇನೂ ವಿವಶನಲ್ಲ. ಅವನ ಹಿರಿಮೆಯನ್ನು- ಪರಿಪೂರ್ಣವಾದ ಹಿರಿಮೆಯನ್ನು- ಕೊಂಡಾಡಿರಿ."

وَ قُلِ الْحَمْدُ لِلّٰهِ الَّذِيْ لَمْ يَتَّخِذْ وَلَدًا
وَّ لَمْ يَكُنْ لَّهٗ شَرِيْكٌ فِي الْمُلْكِ
وَ لَمْ يَكُنْ لَّهٗ وَلِيٌّ مِّنَ الذُّلِّ
وَ كَبِّرْهُ تَكْبِيْرًا ﴿۱۱۱﴾

---

42. ಇದು ಮಕ್ಕಾದ ಬಹುದೇವವಿಶ್ವಾಸಿಗಳ ಆಕ್ಷೇಪಕ್ಕೆ ನೀಡಲಾಗಿರುವ ಉತ್ತರ. ಸೃಷ್ಟಿಕರ್ತನಿಗೆ 'ಅಲ್ಲಾಹ್' ಎಂಬ ಹೆಸರನ್ನೇನೋ ನಾವು ಕೇಳಿದ್ದೇವೆ, ಆದರೆ ಈ 'ರಹ್ಮಾನ್' ಎಂಬ ಹೆಸರನ್ನು ನೀವು ಎಲ್ಲಿಂದ ತಂದಿರುವಿರಿ ಎಂಬುದು ಅವರ ಆಕ್ಷೇಪವಾಗಿತ್ತು. ಅವರ ಬಳಿ ಆ ಹೆಸರು ಪ್ರಚಲಿತವಿರಲಿಲ್ಲ. ಆದ್ದರಿಂದ ಅದನ್ನು ಕೇಳಿದಾಗ ಅವರು ಮೂಗಿನ ಮೇಲೆ ಬೆರಳಿಟ್ಟು ಕೊಳ್ಳುತ್ತಿದ್ದರು.

43. ಇಬ್ನ್ ಅಬ್ಬಾಸ್‌ರ(ರ) ಪ್ರಕಾರ, ಪ್ರವಾದಿವರ್ಯರು(ಸ) ಅಥವಾ ಅವರ ಇತರ ಸಂಗಾತಿಗಳು ಮಕ್ಕಾದಲ್ಲಿ ನಮಾಝ್ ನಿರ್ವಹಿಸುತ್ತಿದ್ದಾಗ ಉಚ್ಚಸ್ವರದಲ್ಲಿ ಕುರ್‌ಆನ್ ಪಠಿಸಿದರೆ ಸತ್ಯನಿಷೇಧಿಗಳು ಗದ್ದಲವೆಬ್ಬಿಸುತ್ತಿದ್ದರು. ಕೆಲವೊಮ್ಮೆ ಬೈಗುಳಗಳ ಸರಣಿಯನ್ನೇ ಆರಂಭಿಸಿ ಬಿಡುತ್ತಿದ್ದರು. ಆದ್ದರಿಂದಲೇ ಸತ್ಯನಿಷೇಧಿಗಳು ಗದ್ದಲವೆಬ್ಬಿಸಲು ಕಾರಣವಾಗುವಷ್ಟು ಉಚ್ಚಸ್ವರದಲ್ಲೂ ಓದದಿರಿ. ಹಾಗೆಯೇ ತಮ್ಮ ಸಂಗಾತಿಗಳಿಗೂ ಕೇಳಲು ಸಾಧ್ಯವಾಗದಷ್ಟು ಮೆಲುಧ್ವನಿಯಲ್ಲೂ ಓದದಿರಿ. ಈ ಆದೇಶ ಆಗಿನ ಪರಿಸ್ಥಿತಿಗೆ ಮಾತ್ರವಾಗಿದೆ. ಮದೀನಾದಲ್ಲಿ ಬದಲಾದ ಪರಿಸ್ಥಿತಿಯಲ್ಲಿ ಈ ಆದೇಶ ಬಾಕಿ ಇರಲಿಲ್ಲ. ಆದರೆ ಮುಸ್ಲಿಮರು ಮಕ್ಕಾದಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಾಗಲೆಲ್ಲಾ ಈ ನಿರ್ದೇಶದಂತೆಯೇ ವರ್ತಿಸಬೇಕು.